# ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

ಸಂಪಾದಕರು: ಸುಂದರ್ Editor : Sundar

Volume: 01, Issue: 92 RNI Number : KNKAN/25/A2770 11-04-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :92 ರಾಯಚೂರು 11-04-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563


# ಮಥುರಾದಲ್ಲಿ ದುರಂತ: ದೋಣಿ ಮಗುಚಿ 10 ಯಾತ್ರಿಕರ ಸಾವು, ಹಲವರು ನಾಪತ್ತೆ



ಮಥುರಾ (ಉತ್ತರ ಪ್ರದೇಶ): ಯಮುನಾ ನದಿಯಲ್ಲಿ ಶುಕ್ರವಾರ ಮಧ್ಯಾಹ್ನ ಯಾತ್ರಿಕರ ದೋಣಿಯೊಂದು ಮಗುಚಿ ಬಿದ್ದ ಪರಿಣಾಮ 10 ಜನರು ಮೃತಪಟ್ಟಿದ್ದು, ಹಲವರು ನಾಪತ್ತೆಯಾಗಿದ್ದಾರೆ. ಮಾಂತ್ ಪೊಲೀಸ್ ಠಾಣಾ ವ್ಯಾಪ್ತಿಯ ಮಥುರಾದ ವೃಂದಾವನದಲ್ಲಿ ಘಟನೆ ಸಂಭವಿಸಿದೆ.

ಮೃತಪಟ್ಟವರಲ್ಲಿ ಆರು ಮಹಿಳೆಯರು ಮತ್ತು ಮೂವರು ಪುರುಷರು ಸೇರಿದಂತೆ 10 ಜನ ಸೇರಿದ್ದಾರೆ. ಘಟನೆಯಲ್ಲಿ ಹಲವರನ್ನು ರಕ್ಷಿಸಲಾಗಿದ್ದು, , ಮತ್ತು ಸ್ಥಳೀಯ ಮುಳುಗುತಜ್ಞರಿಂದ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ರಕ್ಷಿಸಲ್ಪಟ್ಟವರನ್ನು ವೃಂದಾವನದ ಆಸ್ಪತ್ರೆದೆ ದಾಖಲು ಮಾಡಲಾಗಿದೆ. ಯಾತ್ರಿಕರು ಪಂಜಾಬ್‌ನ ಲೂಧಿಯಾನದಿಂದ ತೀರ್ಥಯಾತ್ರೆಗೆ ಬಂದಿದ್ದರು ಎಂದು ವರದಿಯಾಗಿದೆ.

ಪಾಂಟೂನ್ ಸೇತುವೆಗೆ ಡಿಕ್ಕಿ: ಮಾಂಟ್ ಪೊಲೀಸ್ ಠಾಣೆ ಪ್ರದೇಶದ ಕೆ.ಸಿ. ಘಾಟ್ ಬಳಿ ತೆರಳುತ್ತಿದ್ದಾಗ ಬಲವಾದ ಗಾಳಿ ಬೀಸಿದ್ದು, ಈ ವೇಳೆ ದೋಣಿ ನಿಯಂತ್ರಣ ತಪ್ಪಿ, ಪಾಂಟೂನ್ ಸೇತುವೆಗೆ ಡಿಕ್ಕಿ ಹೊಡೆದು ಏಕಾಏಕಿ ಮಗುಚಿ ಬಿದ್ದಿದೆ. ದೋಣಿಯಲ್ಲಿ ಸುಮಾರು ಮೂರು ಡಜನ್ ಭಕ್ತರು ಪ್ರಯಾಣಿಸುತ್ತಿದ್ದರು ಎಂಬ ಮಾಹಿತಿ ಲಭ್ಯವಾಗಿದೆ. ಘಟನೆ ಗೊತ್ತಾಗುತ್ತಿದ್ದಂತೆ ಹತ್ತಿರದಲ್ಲಿದ್ದ ಜನರು ಸ್ಥಳಕ್ಕೆ ಧಾವಿಸಿದ್ದಾರೆ. ನಾವಿಕರು ಯಾತ್ರಿಕರನ್ನು ರಕ್ಷಿಸಲು ಪ್ರಯತ್ನಿಸಿದರಾದರೂ 10 ಜನ ಮೃತಪಟ್ಟರೆ, 10ಕ್ಕೂ ಹೆಚ್ಚು ಜನ ಕಾಣೆಯಾಗಿದ್ದಾರೆ ಎಂದು ವರದಿಯಾಗಿದೆ.

ತೀರ್ಥಯಾತ್ರೆಗೆ ಬಂದಿದ್ದ 150 ಭಕ್ತರ ತಂಡ: ಲೂಧಿಯಾನದಿಂದ 150 ಭಕ್ತರಿದ್ದ ತಂಡ ದೇವಾಲಯಗಳಿಗೆ ಭೇಟಿ ನೀಡಲು ವೃಂದಾವನಕ್ಕೆ ಆಗಮಿಸಿತ್ತು. ಶುಕ್ರವಾರ ಮಧ್ಯಾಹ್ನ, ಕೆಲವು ಭಕ್ತರು ಯಮುನಾ ನದಿಯಲ್ಲಿ ದೋಣಿ ವಿಹಾರಕ್ಕೆ ಹೊರಟಿದ್ದರು. ನಾವಿಕರು ಯಾತ್ರಿಕರನ್ನು ವಿಹಾರಕ್ಕೆ ಕರೆದೊಯ್ಯುತ್ತಿದ್ದಾಗ, ನೀರಿನ ಬಲವಾದ ಹೊಡೆತಕ್ಕೆ ದೋಣಿ ಇದ್ದಕ್ಕಿದ್ದಂತೆ ಪಾಂಟೂನ್ ಸೇತುವೆಗೆ ಡಿಕ್ಕಿ ಹೊಡೆದು ಮಗುಚಿ ಬಿದ್ದಿದೆ.

ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಮತ್ತು ಮತ್ತು ಡೈವರ್‌ಗಳ ತಂಡ ಸ್ಥಳಕ್ಕೆ ಧಾವಿಸಿದ್ದು 15 ಭಕ್ತರನ್ನು ರಕ್ಷಿಸಿದ್ದಾರೆ. 10 ಭಕ್ತರು ಇನ್ನೂ ಕಾಣೆಯಾಗಿದ್ದು, ಅವರಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಸಿಪಿ ಸಿಂಗ್ ಹೇಳಿದ್ದಾರೆ.

ಮಧ್ಯಾಹ್ನ ಸುಮಾರು 3.15 ರ ಸುಮಾರಿಗೆ, ಯಮುನಾ ನದಿಯಲ್ಲಿ ಪಾಂಟೂನ್ ಸೇತುವೆ ಇರುವ ಸ್ಥಳದಲ್ಲಿ ಈ ದುರಂತ ಸಂಭವಿಸಿದೆ. ದೋಣಿಯಲ್ಲಿ ಸುಮಾರು 25 ರಿಂದ 27 ಜನರಿದ್ದರು ಎಂದು ವರದಿಯಾಗಿದೆ. ನೀರಿನ ಬಲವಾದ ಹೊಡೆತಕ್ಕೆ ದೋಣಿ ಪಾಂಟೂನ್ ಸೇತುವೆಗೆ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ಸಂಭವಿಸಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳುತ್ತಿದ್ದಾರೆ.

ಸ್ಥಳದಿಂದ 10 ಮೃತ ದೇಹಗಳನ್ನು ಹೊರತೆಗೆಯಲಾಗಿದೆ. ಅಗ್ನಿಶಾಮಕ ಸಿಬ್ಬಂದಿ ಮತ್ತು ಪೊಲೀಸರ ತಂಡ, ಸ್ಥಳೀಯ

3ನೇ ಪುಟಕ್ಕೆ

# ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅವಹೇಳನ ಖಂಡನೀಯ

ರಾಯಚೂರು,ಏ.10-

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುರಿತು ಹಗುರವಾಗಿ ಮಾತನಾಡಿರುವುದು ಕೀಳುಮಟ್ಟದ ಹೇಳಿಕೆ ಎಂದು ಎಂಎಲ್‌ಸಿ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಎ. ವಸಂತಕುಮಾರ್ ಖಂಡಿಸಿದ್ದಾರೆ.

ಶುಕ್ರವಾರ ಕಾಂಗ್ರೆಸ್ ಕಾರ್ಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖರ್ಗೆ ಅವರು ಶರ್ಮಾ ಅವರ ಪತ್ನಿಯ ಪಾಸ್‌ಪೋರ್ಟ್ ಕುರಿತು ತನಿಖೆ ನಡೆಸಬೇಕು ಎಂದು ಹೇಳಿಕೆ ನೀಡಿದ್ದ ಹಿನ್ನೆಲೆಯಲ್ಲಿ, ಅದಕ್ಕೆ ಪ್ರತಿಯಾಗಿ ಶರ್ಮಾ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿದರು.

ಶರ್ಮಾ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿರುವ ವಸಂತಕುಮಾರ್, ಅವರು ಭ್ರಷ್ಟಾಚಾರ ಆರೋಪಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಬಿಜೆಪಿ ಸೇರಿದ್ದು, ಆರೆಸ್ಸೆಸ್ ಹಾಗೂ ಬಿಜೆಪಿ ನಾಯಕರನ್ನು ಮೆಚ್ಚಿಸಲು ನಿಯಂತ್ರಣವಿಲ್ಲದೆ ಮಾತನಾಡುತ್ತಿದ್ದಾರೆ ಎಂದು ಟೀಕಿಸಿದರು.

ಹಳೆಯ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ನಂತರ ಖರ್ಗೆ ದೊಡ್ಡ ನಾಯಕರು. ಅವರ ರಾಜಕೀಯ ಅನುಭವ ಶರ್ಮಾ ಅವರಿಗಿಂತ ಬಹಳ ಹೆಚ್ಚು. ಇಂತಹ ನಾಯಕರ ಬಗ್ಗೆ ಅವಹೇಳನಕಾರಿ ಭಾಷೆಯಲ್ಲಿ ಮಾತನಾಡುವುದು ಅಸಭ್ಯತೆ ಮತ್ತು ಸಂಸ್ಕೃತಿಯ ಕೊರತೆಯನ್ನು ತೋರಿಸುತ್ತದೆ ಎಂದರು.

ಬಿಜೆಪಿ ಮತ್ತು ಆರೆಸ್ಸೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಕೆಲ ನಾಯಕರು ಸದಾ ಕಾಂಗ್ರೆಸ್ ನಾಯಕರು ಹಾಗೂ ರಾಹುಲ್ ಗಾಂಧಿ ವಿರುದ್ಧ ಹೇಳಿಕೆ ನೀಡುತ್ತಾರೆ ಎಂದು ಟೀಕಿಸಿದರು.

ಖರ್ಗೆ ಅವರ ಹೇಳಿಕೆಗೆ ತಪ್ಪು ಅರ್ಥ ಕಲ್ಪಿಸಲಾಗುತ್ತಿದೆ. ಅವರು ನೀಡಿದ ಉದಾಹರಣೆಯನ್ನು ಬೇರೆ ರೀತಿಯಲ್ಲಿ ತಿರುಚಿ ಜನರಲ್ಲಿ ತಪ್ಪು ಸಂದೇಶ ಹರಡಲಾಗುತ್ತಿದೆ ಎಂದು ಹೇಳಿದರು.

ಉಪಚುನಾವಣೆ ಕುರಿತು ಮಾತನಾಡಿದ ಅವರು, ದಾವಣಗೆರೆ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ. ಲಿಂಗಾಯತ, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒಳ ಮೀಸಲಾತಿ ಜಾರಿಗೆ ಕ್ರಮ ಕೈಗೊಳ್ಳಲಾಗುವುದು. ಮಾದಿಗ ಹಾಗೂ ಚಾಲವಾಡಿ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದು, ಶೀಘ್ರದಲ್ಲೇ ಜಾರಿಗೆ ತರಲಾಗುವುದು ಎಂದರು.

3ನೇ ಪುಟಕ್ಕೆ

# ರಾಯಚೂರು: ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಬಿದ್ದ ಸಿರವಾರ ಮುಖ್ಯಾಧಿಕಾರಿ; ಸಿನಿಮೀಯ ಬೆನ್ನಟ್ಟಿ ಬಂಧನ!

ರಾಯಚೂರು, ಏಪ್ರಿಲ್ 10: ಜಿಲ್ಲೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಲೋಕಾಯುಕ್ತ ಪೊಲೀಸರು ಭರ್ಜರಿ ಕಾರ್ಯಾಚರಣೆ ನಡೆಸಿದ್ದಾರೆ. ಖಾತಾ ಮ್ಯೂಟೇಶನ್ ಮಾಡಿಕೊಡಲು ಲಂಚಕ್ಕೆ ಬೇಡಿಕೆಯಿಟ್ಟಿದ್ದ ಸಿರವಾರ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಸುರೇಶ್ ಶೆಟ್ಟಿ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಸಿನಿಮೀಯ ರೀತಿಯಲ್ಲಿ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆದಿದ್ದಾರೆ.



ಘಟನೆಯ ಹಿನ್ನೆಲೆ:

ಸಿರವಾರ ಪಟ್ಟಣದ ಹೊಸ ಲೇಔಟ್‌ನ 34 ನಿವೇಶನಗಳ ಖಾತಾ ಮ್ಯೂಟೇಶನ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಮುಖ್ಯಾಧಿಕಾರಿ ಸುರೇಶ್ ಶೆಟ್ಟಿ ಅವರು ಲೇಔಟ್ ಮಾಲೀಕ ರಘುರಾಮ್ ರೆಡ್ಡಿ ಅವರಿಂದ 2 ಲಕ್ಷ ರೂ. ಲಂಚಕ್ಕೆ ಬೇಡಿಕೆಯಿಟ್ಟಿದ್ದರು ಎನ್ನಲಾಗಿದೆ. ಈ ಕುರಿತು ರಘುರಾಮ್ ರೆಡ್ಡಿ ಅವರು ನೀಡಿದ ದೂರಿನ ಆಧಾರದ ಮೇಲೆ ಲೋಕಾಯುಕ್ತ ಪೊಲೀಸರು ಬಲೆ ಬೀಸಿದ್ದರು.

ಸಿನಿಮೀಯ ರೀತಿಯಲ್ಲಿ ಪರಾರಿಯಾಗಲು ಯತ್ನ:

ಗುರುವಾರ ರಘುರಾಮ್ ರೆಡ್ಡಿ ಅವರು 1 ಲಕ್ಷ ರೂ. ಮುಂಗಡ ಹಣವನ್ನು ನೀಡುತ್ತಿದ್ದ ವೇಳೆ ಲೋಕಾಯುಕ್ತರು ದಾಳಿ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಅಧಿಕಾರಿಗಳಿಂದ ತಪ್ಪಿಸಿಕೊಳ್ಳಲು ಸುರೇಶ್ ಶೆಟ್ಟಿ ತನ್ನ ಕಾರಿನಲ್ಲಿ ವೇಗವಾಗಿ ಪರಾರಿಯಾಗಲು ಯತ್ನಿಸಿದ್ದಾರೆ. ತಕ್ಷಣ ಕಾರ್ಯಪ್ರವೃತ್ತರಾದ ಲೋಕಾಯುಕ್ತ ತಂಡವು ಆರೋಪಿಯ ಮೊಬೈಲ್ ಲೊಕೇಶನ್ ಟ್ರೇಸ್ ಮಾಡುವ ಮೂಲಕ ಅವರ ಚಲನವಲನಗಳನ್ನು ಗಮನಿಸಿದೆ.

ಸ್ನೇಹಿತನ ಮನೆಯಲ್ಲಿ ಬಂಧನ:

ಪರಾರಿಯಾಗಿದ್ದ ಸುರೇಶ್ ಶೆಟ್ಟಿ ಅವರು

3ನೇ ಪುಟಕ್ಕೆ

# ಬಯ್ಯಾಪೂರು ಕಾಲೇಜಿಗೆ ಉತ್ತಮ ಫಲಿತಾಂಶ





ಸಿರವಾರ,ಏ.10-

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪೂರು ಪದವಿ ಪೂರ್ವ ಕಾಲೇಜಿಗೆ ಪಿಯುಸಿ ಪಲಿತಾಂಶದಲ್ಲಿ ಉತ್ತಮ ಪಲಿತಾಂಶ ಬಂದಿದ್ದೂ, ಕಲಾ ವಿಭಾಗದಲ್ಲಿ ತಾಲೂಕಿಗೆ ಭೂಮಿಕಾ 600 ಕ್ಕೆ 566 ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ. 08 ಉನ್ನತ ಶ್ರೇಣಿ,. 42 ಪ್ರಥಮ ಸ್ಥಾನ. 26 ದ್ವಿತೀಯ ಸ್ಥಾನ.16 ಸಾಮಾನ್ಯ ಉತೀರ್ಣ ರಾಗಿದ್ದಾರೆ. ಒಟ್ಟು ಪರೀಕ್ಷೆಗೆ ಹಾಜರಾ ದವರು ಕಲಾ ಮತ್ತು ವಾಣಿಜ್ಯ

3ನೇ ಪುಟಕ್ಕೆ

# ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ವಾಣಿಜ್ಯ ವಿಭಾಗದಲ್ಲಿ ಪ್ರಥಮ

ಸಿರವಾರ,ಏ.10-

2025 26 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ರ ಫಲಿತಾಂಶ ಪ್ರಕಟವಾಗಿದ್ದೂ. ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮವಾದ ಫಲಿತಾಂಶವನ್ನು ತಂದಿದ್ದಾರೆ

ವಾಣಿಜ್ಯ ವಿಭಾಗದಲ್ಲಿ ಸುಜಾತ ತಂ ರಂಗಣ್ಣ 600 ಕ್ಕೆ 536 ಪಡೆದು ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾ ರೆ. ದ್ವಿತೀಯ ಪಿಯುಸಿ ಕಲಾ ವಿಭಾಗದಲ್ಲಿ ಲಕ್ಷ್ಮೀ ತಂದೆ ಶೇಖರಪ್ಪ ಜಾಗಿರ ಜಾಡಲದಿನ್ನಿ 600/554 ಶೇ



92.33% ಪ್ರಥಮ ಸ್ಥಾನ ಪಡೆದಿದ್ದಾರೆ.

ಕಲಾ ವಿಭಾಗದಲ್ಲಿ 08 ವಿದ್ಯಾರ್ಥಿಗಳು ಉನ್ನತ ಶ್ರೇಣಿ ವಾಣಿಜ್ಯ ವಿಭಾಗದಲ್ಲಿ 02 ವಿದ್ಯಾರ್ಥಿಗಳು ಉನ್ನತ ಶ್ರೇಣಿ



ಕಲಾ ವಿಭಾಗದಲ್ಲಿ 12 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಮತ್ತು ವಾಣಿಜ್ಯ ವಿಭಾಗದಲ್ಲಿ 05 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಪಡೆದಿದ್ದಾರೆ ಹಾಗೂ 05 ವಿದ್ಯಾರ್ಥಿಗಳು ದ್ವಿತೀಯ ದರ್ಜೆ ಹಾಗೂ 08 ವಿದ್ಯಾರ್ಥಿಗಳು ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಕಾಲೇಜಿನ ಅದ್ಯಕ್ಷರಾದ ಬ್ರಿಜೇಶ್ ಪಾಟೀಲ್, ಉಪಾದ್ಯಕ್ಷ ಅಮರೇಶ್ ಪಟೇಲ್ ಆಶಾಪುರ್ ಹಾಗೂ ಸದಸ್ಯರಾದ ಮಂಜುನಾಥ್ ಪಾಟೀಲ್ ವಟಗಲ್, ಆದನಗೌಡ ಪಾಟೀಲ್ ವಟಗಲ್ , ದ್ರಾಕ್ಷಾಯಿನಿ, ಪ್ರಾಚಾರ್ಯರಾದ ದಾವಲಸಾಬ್ ನಾಗಡದಿನ್ನಿ ಉಪನ್ಯಾಸಕರು ಹಾಗೂ ದ್ವಿತೀಯ ದರ್ಜೆ ಸಹಾಯಕರು ಸ್ವಾಮಿ ಅಭಿನಂದನೆ ತಿಳಿಸಿದ್ದಾರೆ



# ಕನ್ನಡದ ಹಿರಿಯ ನಟ ಅಶೋಕ್‌ರಿಗೆ ಕಲಾ ಸಂಕುಲ ಸಂಸ್ಥೆಯಿಂದ ಸನ್ಮಾನ

ರಾಯಚೂರು ಏ.10.

ಕನ್ನಡ ಚಲನಚಿತ್ರ ರಂಗದಲ್ಲಿ ಸುಧೀರ್ಘವಾಗಿ ಸೇವೆ ಸಲ್ಲಿಸಿದ ಅಶೋಕ ಅವರಿಗೆ ಇಂದು ರಾಯಚೂರು ನಗರದ ಖಾಸಗಿ ಹೋಟೆಲ್ ನಲ್ಲಿ ಕಲಾ ಸಂಕುಲ ಸಂಸ್ಥೆ ಕಾರ್ಯದರ್ಶಿ ಮಾರುತಿ ಬಡಿಗೇರ್ ಸನ್ಮಾನಿಸಿ ಗೌರವಿಸಿದರು..

ಅಶೋಕ್ ಕನ್ನಡ ಚಿತ್ರರಂಗದಲ್ಲಿ ಸಕ್ರಿಯವಾಗಿರುವ ಹಿರಿಯ ನಟ 74 ವಯಸ್ಸಾ ಗಿದ್ದರು ಇನ್ನೂ ಹೀರೋ ತರ ಕಂಗೊಳಿಸುತ್ತಿದ್ದಾರೆ.

3ನೇ ಪುಟಕ್ಕೆ

# ಸಿರವಾರ: ಗುತ್ತಿಗೆ ಪದ್ಧತಿ ರದ್ದು, ಕನಿಷ್ಠ ವೇತನ ಹೆಚ್ಚಳಕ್ಕೆ ಒತ್ತಾಯಿಸಿ ರಸ್ತೆ ತಡೆ

ಸಿರವಾರ,ಏ.10-

ರಾಜ್ಯ ಹಾಗೂ ದೇಶದಾದ್ಯಂತ ಕಾರ್ಮಿಕರ ಬದುಕು ದಿನೇದಿನೇ ಸ'ಂಕ'ಷ್ಟ'ಕ್ಕೀಡಾಗ'ುತ್ತಿ ರ'ುವ' ಹಿನ್ನೆಲೆಯಲ್ಲಿ ಕನಿಷ್ಠ ವೇತನವನ್ನು ತಕ್ಷಣ ಪರಿಷ್ಕರಿಸಿ ತಿಂಗಳಿಗೆ ಕನಿಷ್ಠ ₹42,000 ನಿಗದಿ ಮಾಡಬೇಕು, ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ ಗುತ್ತಿಗೆ ಕಾರ್ಮಿಕರನ್ನು ಖಾಯಂ ಗೊಳಿಸಬೇಕು ಎಂದು ಆಗ್ರಹಿಸಿ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘ (ಎಐಸಿಸಿಟಿಯು) ಸಿರವಾರ ವಿಭಾಗದ ಸಮಿತಿ ವತಿಯಿಂದ ನಗರದ ಬಸ್ ನಿಲ್ದಾಣದ ಮುಂಭಾಗ ರಸ್ತೆ ತಡೆ ನಡೆಸಿ ಪ್ರತಿಭಟನೆ ಮಾಡಲಾಯಿತು.

ಈ ವೇಳೆ ಮಾತನಾಡಿದ ತುಂಗಭದ್ರಾ ನೀರಾವರಿ ಕಾರ್ಮಿಕ ಸಂಘದ ಕೇಂದ್ರ ಸಮಿತಿಯ ಅಧ್ಯಕ್ಷ ಕೆ. ನಾಗಲಿಂಗಸ್ವಾಮಿ ಅವರು, ರಾಜ್ಯ



ಸರ್ಕಾರವು ಕನಿಷ್ಠ ವೇತನ ಪರಿಷ್ಕರಣೆಯಲ್ಲಿ ವಿಫಲವಾಗಿದೆ ಸಂಘಟನೆಗಳು ಆರೋಪಿಸಿವೆ. ಕಾನೂನು ಪ್ರಕಾರ ಐದು ವರ್ಷಕ್ಕೊಮ್ಮೆ ವೇತನ ಪರಿಷ್ಕರಣೆ ಮಾಡಬೇಕಾದರೂ ಕೊನೆಯದಾಗಿ 2017 ರಲ್ಲಿ ಮಾತ್ರ ಪರಿಷ್ಕರಣೆ ನಡೆದಿದ್ದು, ಬಳಿಕ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ. 2025ರಲ್ಲಿ ಸುಮಾರು ₹25,000ಕ್ಕೆ ಹೆಚ್ಚಿಸುವ ಪ್ರಾಥಮಿಕ ಅಧಿಸೂಚನೆ ಹೊರಬಂದಿದ್ದರೂ ಅದನ್ನು ಇನ್ನೂ ಅಂತಿಮಗೊಳಿಸಿಲ್ಲ ಎಂದು ಅವರು ಹೇಳಿದರು.

ಪ್ರಸ್ತುತ ವೇತನದಲ್ಲಿ ಆಹಾರ, ಬಟ್ಟೆ, ಮನೆ ಬಾಡಿಗೆ, ಮಕ್ಕಳ ಶಿಕ್ಷಣ ಸೇರಿದಂತೆ ಮೂಲಭೂತ ಅಗತ್ಯಗಳನ್ನು ಪೂರೈಸುವುದು ಅಸಾಧ್ಯವಾಗಿದೆ. ಒಬ್ಬ ಕಾರ್ಮಿಕನು ಗೌರವಯುತ ಜೀವನ ನಡೆಸಲು ಕನಿಷ್ಠ ₹42,000 ವೇತನ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಸುಪ್ರೀಂ ಕೋರ್ಟ್‌ನ ಪ್ರಕಾರ ಕನಿಷ್ಠ ವೇತನ ನೀಡದಿರುವುದು ಬಲವಂತದ ಕೆಲಸಕ್ಕೆ ಸಮಾನವಾಗುತ್ತದೆ. ಆದಾಗ್ಯೂ ಆಸ್ಪತ್ರೆಗಳು, ಬಸ್ ನಿಲ್ದಾಣಗಳು, ಗ್ರಂಥಾಲಯ

3ನೇ ಪುಟಕ್ಕೆ

## ಜಯಂತಿ ಪೂರ್ವಭಾವಿ ಸಭೆ

# ಶಂಕರಾಚಾರ್ಯ ಜಯಂತಿ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಿ: ಶಿವಾನಂದ

ರಾಯಚೂರು,ಏ.10

ದೇಶದಲ್ಲಿ ಸನಾತನ ಧರ್ಮದ ರಕ್ಷಣೆ ಮತ್ತು ತತ್ವ ಸಿದ್ಧಾಂತಗಳ ಪ್ರಚಾರಕ್ಕೆ ಹಗಲಿರುಳು ಶ್ರಮಿಸಿದ ಶ್ರೀ ಶಂಕರಾಚಾರ್ಯ ಜಯಂತಿಯನ್ನು ಜಿಲ್ಲಾಡಳಿತದಿಂದ ಅರ್ಥಪೂ ರ್ಣ ಹಾಗೂ ವಿಜೃಂಭಣೆಯಿದ ಆಚರಿಸಲು ಎಲ್ಲ ಸಿದ್ಧತೆ ಮಾಡಿಕೊಳ್ಳು ವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ತಿಳಿಸಿದರು.

ಏಪ್ರಿಲ್ 09ರ ಗುರುವಾರದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಶ್ರೀ ಶಂಕರಾಚಾರ್ಯ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.



ಏಪ್ರಿಲ್ 21ರ ಸಂಜೆ 5ಗಂಟೆಗೆ ನಗರದ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅದಕ್ಕೂ ಮುಂಚೆ ನಗರದ ಸರಾಫ್ ಉದ್ಯಾನವನ, ಜವಾಹರ ನಗರ ಶಾಲೆ, ಎಸ್.ಬಿ.ಐ. ಮಂದಿರದಿದ ವಾಸವಿ ವೃತ್ತ, ಹನುಮಾನ ಟಾಕೀಸ್ ದ್ವಾರ, ನಗರೇಶ್ವರ ದೇವಸ್ಥಾನ, ಚೌಡಮ್ಮ ಕಟ್ಟೆಯ ಮಾರ್ಗವಾಗಿ ಶಂಕರ ಮಠದವರೆಗೆ ಮೆರವಣಿಗೆ ನಡೆಯಲಿದೆ ಎಂದರು.

ಕಾರ್ಯಕ್ರಮಕ್ಕೆ ಪೊಲೀಸ್ ಬಂದೋಬಸ್ತ್, ಕಲಾ ತಂಡಗಳ ನೇಮಕ, ಉಪನ್ಯಾಸಕರು, ಆಮಂತ್ರಣ ಪತ್ರಿಕೆ, ವೇದಿಕೆ, ಧ್ವನಿ-ಬೆಳಕು, ಆಸನ, ಕುಡಿಯುವ ನೀರು, ಉಪಾಹಾರ, ವ್ಯವಸ್ಥೆಯನ್ನು ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಸಮನ್ವಯದಿಂದ ಮಾಡಬೇಕೆಂದು ಸಲಹೆ ನೀಡಿದರು.

ಶ್ರೀ ಶಂಕರಾಚಾರ್ಯ ಜಯಂತಿಯನ್ನು ಎಲ್ಲ ಶಾಲಾ-ಕಾಲೇಜುಗಳಲ್ಲಿ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಆಚರಣೆ ಮಾಡಬೇಕೆಂದು ಸಂಬಧಿಸಿದ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು.

ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಅಪರ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ, ಸಮಾಜದ ಮುಖಂಡರಾದ ಸಿ.ವಸಂತ ರಾವ್, ಕೃಷ್ಣ ಮೂರ್ತಿ ಹೆಬಸೂರು, ಹೆಚ್.ಹನು

3ನೇ ಪುಟಕ್ಕೆ

### ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆ

# ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮದ ಅನುಷ್ಠಾನದಲ್ಲಿ ನಿರ್ಲಕ್ಷ್ಯ ಬೇಡ - ಯು. ನಿಸಾರ್ ಅಹ್ಮದ್

ಕೊಪ್ಪಳ ಏ.10

ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದಡಿ ಅಲ್ಪಸಂಖ್ಯಾತರ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಎಲ್ಲಾ ಇಲಾಖೆಗಳು ಹೆಚ್ಚಿನ ಆದ್ಯತೆ ನೀಡಬೇಕು. ಯೋಜನೆಗಳ ಅನುಷ್ಠಾನದಲ್ಲಿ ಯಾವುದೇ ನಿರ್ಲಕ್ಷ್ಯ ಬೇಡ ಎಂದು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಯು. ನಾಸೀರ್ ಅಹ್ಮದ್ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಗುರುವಾರ ಕೊಪ್ಪಳ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮವು ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್, ಪಾರ್ಸಿ ಹಾಗೂ ಬೌದ್ಧ ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ ರೂಪಿಸಲಾದ ಪ್ರಮುಖ ಯೋಜನೆಯಾಗಿದೆ. ಈ ಯೋಜನೆಗಳಡಿ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಉಚಿತ ಪರೀಕ್ಷಾ ಪೂರ್ವ ತರಬೇತಿ, ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಸೇರಿದಂತೆ ವಿವಿಧ ಯೋಜನೆಗಳ ಲಾಭವನ್ನು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಆಯಾ ಇಲಾಖಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದಡಿ ಕೊಪ್ಪಳ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಸಾಧಿಸಿರುವ ಪ್ರಗತಿ ಪರಿಶೀಲಿಸಿದ ಅಧ್ಯಕ್ಷರು ನಿಗದಿತ ಗುರಿಯಂತೆ ಪ್ರಗತಿ ಸಾಧನೆಗೆ ವಿಳಂಬವಾಗುತ್ತಿರುವ ಯೋಜನೆಗಳನ್ನು ಆದ್ಯತೆ ಮೇರೆಗೆ ತ್ವರಿತವಾಗಿ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಅಲ್ಪಸಂಖ್ಯಾತರ ಕಲ್ಯಾಣ ಯೋಜನೆಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ವಿಶೇಷ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ನಿವೇಶನ, ಮನೆಗಳ ಹಂಚಿಕೆ, ಗಂಗಾ ಕಲ್ಯಾಣ, ಸ್ವಯಂ ಉದ್ಯೋಗ ಯೋಜನೆಗಳು ಸೇರಿದಂತೆ ವಿವಿಧ ಇಲಾಖೆಗಳ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸಲು ಇಲಾಖಾ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಸಾಕ್ಷರತಾ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳ ಜೊತೆ ಸಮನ್ವಯ ಸಭೆ ನಡೆಸಿ 6 ವರ್ಷದ ಮಕ್ಕಳ ಸಮಗ್ರ ಸಮೀಕ್ಷೆ ನಡೆಸಬೇಕು. ಶಾಲೆಯಲ್ಲಿರುವ 6 ವರ್ಷದ ಮಕ್ಕಳ ಸಂಖ್ಯೆ ಲಭ್ಯವಿದ್ದರೂ ಶಾಲೆಯಿಂದ ಅನೇಕ ಮಕ್ಕಳು ಹೊರಗುಳಿದಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ರಾಜ್ಯದಲ್ಲಿ ಆರು ವರ್ಷದ ಮಕ್ಕಳ ನಿಖರ ದತ್ತಾಂಶ ಸಂಗ್ರಹಣೆ ಇಲ್ಲದಿರುವ ಹಿನ್ನೆಲೆಯಲ್ಲಿ ಕಳೆದ ಒಂದು ವರ್ಷದಿಂದ ಮಾಹಿತಿ ಸಂಗ್ರಹಣೆಗೆ ಪ್ರಯತ್ನ ನಡೆಯುತ್ತಿದೆ. 100 ಮಕ್ಕಳಲ್ಲಿ 6 ವರ್ಷದವರು ಇದ್ದರೆ ಅದರಲ್ಲಿ ಸುಮಾರು 80 ಮಕ್ಕಳು ಮಾತ್ರ ಶಾಲೆಗೆ ಸೇರಿರುವ ಸಾಧ್ಯತೆ ಇದೆ. ಆದರೆ ಶಾಲೆಯಲ್ಲಿ ಇಲ್ಲದ ಉಳಿದ ಮಕ್ಕಳ ನಿಖರ ಸಂಖ್ಯೆಯ ಮಾಹಿತಿ ಇದುವರೆಗೆ ಲಭ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಸಾಕ್ಷರತಾ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಭೆ ನಡೆಸಿ ಅಗತ್ಯ ಕಾರ್ಯಯೋಜನೆ ರೂಪಿಸಿ ಎಂದು ಅವರು ಹೇಳಿದರು.

ಜಿಲ್ಲೆಯಲ್ಲಿ ಅಲ್ಪಸಂಖ್ಯಾತ ಕಲ್ಯಾಣ ಯೋಜನೆಗಳ ಅನುಷ್ಠಾನ ಹಾಗೂ ಸರ್ಕಾರದ ಸೌಲಭ್ಯಗಳು ಅಲ್ಪಸಂಖ್ಯಾತರಿಗೆ ಸಮರ್ಪಕವಾಗಿ ತಲುಪುತ್ತಿರುವ ಬಗ್ಗೆ ಸುದೀರ್ಘ ಸಭೆ ನಡೆಸಿ ಸಂಬಂಧಿಸಿದ ಇಲಾಖೆಗಳೊಂದಿಗೆ ಪರಾಮರ್ಶೆ ಮಾಡಲಾಗಿದೆ ಎಂದು ತಿಳಿಸಿದರು.

ಸಾಮಾಜಿಕ ಜಾಲತಾಣಗಳಲ್ಲಿ ಅಸಭ್ಯ ಅಥವಾ ಅಪ್ರಸ್ತುತ ಸಂದೇಶಗಳನ್ನು, ದ್ವೇಷ ಭಾಷಣದಂತಹ ವಿಡಿಯೋಗಳ ಬಗ್ಗೆ ಗಮನ ಹರಿಸಿ. ಸಮಾಜದ ಶಾಂತಿ ಕದಡುವ ಯಾವುದೇ ಸನ್ನಿವೇಶಗಳಿಗೆ ಆಸ್ಪದ ಕೊಡಬೇಡಿ. ಜಿಲ್ಲೆಯಲ್ಲಿ ಎಲ್ಲ ಧರ್ಮಗಳ ನಡುವಿನ ಸಾಮರಸ್ಯ, ಕೋಮು ಗಲಭೆ ರಹಿತ ಹಬ್ಬಗಳ ಆಚರಣೆ ಹೆಮ್ಮೆಯ ವಿಷಯ. ಈ ನಿಟ್ಟಿನಲ್ಲಿ ಜಿಲ್ಲೆಯ ಪೊಲೀಸರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಇದು ಹೀಗೆಯೇ ಮುಂದುವರೆಯಲಿ ಎಂದು ಅವರು ಸಂತಸ ವ್ಯಕ್ತಪಡಿಸಿದರು.

ಭವಿಷ್ಯದಲ್ಲಿ ಉತ್ತಮ ಉದ್ಯೋಗಾವಕಾಶವಿರುವ ವೃತ್ತಿ ಆಧಾರಿತ ತರಬೇತಿಗಳನ್ನು ಅರ್ಹರಿಗೆ ನೀಡಿ. ಸಾಗರದಾಚೆಗಿನ ಉದ್ಯೋಗವಕಾಶಗಳ ಬಗ್ಗೆ ಜಾಗೃತಿ ಮೂಡಿಸಿ, ನಿಮ್ಮಲ್ಲಿ ಆ ಸೌಲಭ್ಯವಿಲ್ಲದಿದ್ದಲ್ಲಿ, ಸೌಲಭ್ಯವಿರುವೆಡೆ ಕಳಿಸಿ ವೃತ್ತಿ ಕೌಶಲ್ಯ ತರಬೇತಿ ನೀಡಿ. ಅಲ್ಪಸಂಖ್ಯಾತರು ಮಾತ್ರವಲ್ಲದೆ ಎಲ್ಲ ವರ್ಗದ ಅರ್ಹರಿಗೂ ಉದ್ಯೋಗವಕಾಶ 'ಗಳನ್ನು ಒದಗಿಸುವುದು ಅಧಿಕಾರಿಗಳ ಜವಾಬ್ದಾರಿಯಾಗಬೇಕು. ಸ್ವ ಉದ್ದಿಮೆ ಸ್ಥಾಪಿಸಲು ತರಬೇತಿಯೊಂದಿಗೆ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯವನ್ನೂ ಒದಗಿಸಬೇಕು ಎಂದು ಅವರು ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಮುಜಿಬುಲ್ಲಾ ಜಫಾರಿ, ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್.ಅರಸಿದ್ದಿ, ಡಿಎಫ್‌ಒ ನಿರ್ಮಲಾ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಟಿ ಕೃಷ್ಣಮೂರ್ತಿ, ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮ ಜಿಲ್ಲಾ ಸ್ಥಾಯಿ ಸಮಿತಿ ಸದಸ್ಯರಾದ ಪ್ರಶಾಂತ ದೇಸಾಯಿ, ಮೊಹ್ಮದ ನಜಿರುದ್ದೀನ ಮೂಲಿಮನಿ, ಮಹಬೂಬ ಪಾಷಾ ಮಾನ್ವಿ, ಎಂ.ಡಿ.ಸಿರಾಜ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಅಜ್ಮೀರ ಅಲಿ, ಡಿಎಚ್‌ಒ ಡಾ.ಲಿಂಗರಾಜು ಟಿ., ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.




### ಆಟೋ ಪಾರ್ಕ್ ಸ್ಥಾಪನೆ: ಸಚಿವರಿಂದ 2 ದಿನಗಳ ಕಾರ್ಯಾಗಾರ ಉದ್ಘಾಟನೆ

# ಕಲಬುರಗಿ ಸಮಗ್ರ ಅಭಿವೃದ್ಧಿಗೆ ನೀಲಿನಕ್ಷೆ : ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ,ಏ.10-

ನಗರದ ಸಮಗ್ರ ಅಭಿವೃದ್ಧಿಗಾಗಿ ನವ ಕಲಬುರಗಿ ನಿರ್ಮಾಣಕ್ಕೆ ನೀಲಿ ನಕ್ಷೆ ಸಿದ್ದವಾಗಿದ್ದು, ಮುಂದಿನ ಎರಡು ವರ್ಷಗಳಲ್ಲಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಗಂಜ್ ಪ್ರದೇಶದ ಎಸ್‌ಆರ್‌ಕೆ ಸಭಾಂಗಣದಲ್ಲಿ ಯೋಜನೆಯಡಿ ಏಪ್ರಿಲ್ 9 ಮತ್ತು 10ರಂದು ನಡೆಯುವ ಎರಡು ದಿನಗಳ ಟೆಕ್ನಾಲಜಿ ಕ್ಲಿನಿಕ್ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೈಗಾರಿಕೆ, ಕೃಷಿ, ಪ್ರವಾಸೋದ್ಯಮ, ಮೂಲಭೂತ ಸೌಲಭ್ಯಗಳು, ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳನ್ನು ಬಲಪಡಿಸಿ ಕಲಬುರಗಿಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶ ಹೊಂದಲಾಗಿದೆ. ಪ್ರಸ್ತುತ ರಾಜ್ಯದ ಜಿಡಿಪಿಯಲ್ಲಿ ಜಿಲ್ಲೆಯ ಕೊಡುಗೆ ಕೇವಲ 1.5% ಮಾತ್ರವಿದ್ದು, ಇದನ್ನು 2.5%ಕ್ಕೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದರು.

ನವತಂತ್ರಜ್ಞಾನ ಬಳಸಿ ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ನೀಡಲಾಗುವುದು. ನಂದೂರು ಸಮೀಪ ವ್ಯಾನುಫ್ಯಾಕ್ಚರಿಂಗ್ ಎಕ್ಸ್ ಪೋರ್ಟ್ ವಲಯ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದ್ದು, ಇಂಜಿನಿಯರಿಂಗ್ ಹಾಗೂ ಐಟಿಐ ಪದವೀಧರರಿಗೆ ಸ್ಟಾರ್ಟ್‌ಅಪ್ ಅವಕಾಶಗಳನ್ನು ಸೃಷ್ಟಿಸಲಾಗುವುದು ಎಂದು ತಿಳಿಸಿದರು.

ಕೃಷಿ ಹಾಗೂ ತೋಟಗಾರಿಕೆಗೆ ಉತ್ತೇಜನ ನೀಡಲು ಕಮಲಾಪುರ ಬಾಳೆ ಹಣ್ಣನ್ನು ದೇಶ-ವಿದೇಶಗಳಲ್ಲಿ ಪ್ರಸಿದ್ಧಿಪಡಿಸಲು ಪ್ರಯತ್ನಿಸಲಾಗುವುದು ಎಂದರು.


ಆಟೋ ಪಾರ್ಕ್ ಯೋಜನೆಗೆ ವೇಗ :

ಕಪನೂರ ಕೈಗಾರಿಕಾ ಪ್ರದೇಶದಲ್ಲಿ 20 ಎಕರೆ ಜಾಗದಲ್ಲಿ ಕಲಬುರಗಿ ಆಟೋ ಪಾರ್ಕ್ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿದ್ದು, ಕೆಐಎಡಿಬಿ ಮಂಡಳಿ ಅನುಮೋದನೆ ನೀಡಿದೆ. ಈ ಪಾರ್ಕ್‌ನಲ್ಲಿ ಆಟೋಮೊಬೈಲ್ ಸರ್ವೀಸ್, ಫ್ಯಾಬ್ರಿಕೇಷನ್, ಜನರಲ್ ಇಂಜಿನಿಯರಿಂಗ್ ಸೇರಿದಂತೆ ವಿವಿಧ ಸಣ್ಣ ಕೈಗಾರಿಕೆಗಳನ್ನು ಒಂದೇ ಸೂರಿನಡಿ ಸ್ಥಳಾಂತರಿಸಲು ಅವಕಾಶ ಕಲ್ಪಿಸಲಾಗುವುದು.

ಈ ಯೋಜನೆಯಿಂದ ಸುಮಾರು 2000 ಮಂದಿಗೆ ನೇರ ಉದ್ಯೋಗ ಹಾಗೂ 5000 ಮಂದಿಗೆ ಪರೋಕ್ಷ ಉದ್ಯೋಗ ಸಿಗಲಿದೆ. ಈಗಾಗಲೇ 700ಕ್ಕೂ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ ಎಂದು ಸಚಿವರು ತಿಳಿಸಿದರು.

ವೇದಿಕೆಯ ಮೇಲೆ ಶಾಸಕರಾದ ಕನೀಜ್ ಫಾತೀಮಾ, ಅಲ್ಲಮಪ್ರಭು ಪಾಟೀಲ್, ಎಂಎಲ್ಸಿ ತಿಪ್ಪಣ್ಣಪ್ಪ ಕಮಕನೂರು, ಜಗದೇವ ಗುತ್ತೇದಾರ, ಮಹಜರ್ ಆಲಂ ಖಾನ್, ಕೆಕೆಆರ್ ಟಿಸಿ ಅಧ್ಯಕ್ಷ ಅರುಣ್ ಕುಮಾರ್ ಎಂ.ವೈ ಪಾಟೀಲ್ , ಜಿಲ್ಲಾಧಿಕಾರಿ ಫೌಝಿಯಾ ತರನ್ನುಮ್, ಸಿಇಒ ಭಂವರ್ ಸಿಂಗ್ ಮೀನಾ ಸೇರಿದಂತೆ ಹಲವರಿದ್ದರು.

# ಸೇಡಂನಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಕಟ್ಟುನಿಟ್ಟಿನ ನಿಗಾವಹಿಸಿ : ಸಚಿವ ಡಾ.ಶರಣಪ್ರಕಾಶ್ ಪಾಟೀಲ್



ಸೇಡಂ,ಏ.10-

ಬೇಸಿಗೆ ಹಿನ್ನೆಲೆಯಲ್ಲಿ ತಾಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ಕಟ್ಟುನಿಟ್ಟಾಗಿ ನಿಗಾವಹಿಸಬೇಕು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಸೂಚಿಸಿದರು.

ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ಕುಡಿಯುವ ನೀರಿನ ಪರಿಶೀಲನಾ ಟಾಸ್ಕ್ ಫೋರ್ಸ್ ಸಭೆಯಲ್ಲಿ ಮಾತನಾಡಿದ ಅವರು, ಎಲ್ಲಿಯಾದರೂ ನೀರಿನ ಸಮಸ್ಯೆ ಕಂಡುಬಂದರೆ ಸಂಬಂಧಿತ ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆ ಎಂದು ಎಚ್ಚರಿಸಿದರು. ಅಧಿಕಾರಿಗಳ ಫೋನ್ ಸ್ವಿಚ್ ಆಫ್ ಇದ್ದಲ್ಲಿ ವರದಿ ಪಡೆದು ನೋಟಿಸ್ ನೀಡಿ ಸಸ್ಪೆಂಡ್ ಮಾಡುವುದಾಗಿ ಖಡಕ್ ಸೂಚನೆ ನೀಡಿದರು.

ಗ್ರಾಮೀಣ ಭಾಗಗಳಲ್ಲಿ ನೀರಿನ ಕೊರತೆ ಕಂಡುಬಂದರೆ ತಕ್ಷಣ ಬೋರ್‌ವೆಲ್ ಕೊರೆದು ಸಮಸ್ಯೆ ಪರಿಹರಿಸಬೇಕು. ಬೋರ್‌ವೆಲ್ ಮೋಟರ್ ಸುಟ್ಟಂತಹ ಸಂದರ್ಭಗಳಲ್ಲಿ ತಕ್ಷಣ ಸ್ಪಂದನೆ ನೀಡದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಮದನಾದ ಪೋಶಾಮ್ಮಾಯಿ ಗುಡಿ, ಕುಕ್ಕುಂದಾ ಎಸ್ಸಿ ಓಣಿ, ಮದಕಲ್ ಮತ್ತು ಕುರುಕುಂಡಾ ಗ್ರಾಮಗಳಲ್ಲಿ ನೀರಿನ ಕೊರತೆ ಬಗ್ಗೆ ಪಿಡಿಒಗಳು ಸಚಿವರ ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ ಜಲ ಜೀವನ್ ಮಿಷನ್ (ಜೆಜೆಎಂ) ಹಾಗೂ ಹೆಚ್ಚುವರಿ ಅನುದಾನದಿಂದ ಹೊಸ ನೀರಿನ ಮೂಲಗಳನ್ನು ಸೃಷ್ಟಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜೆಜೆಎಂ ಕಾಮಗಾರಿಗಳ ವಿವರಗಳು ಪಿಡಿಒಗಳ ಬಳಿ ಇರಬೇಕು ಎಂದು ಸೂಚಿಸಿದ ಸಚಿವರು, ಮಾಹಿತಿ ಇಲ್ಲದ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಇದೇ ವೇಳೆ ಕುರುಕುಂಟಾ, ಇಟ್ಟಕಲ್ ಮತ್ತು ಕೋಲಕುಂದಾ ಗ್ರಾಮಗಳಲ್ಲಿ ವೈದ್ಯರ ಕೊರತೆ ಇರುವ ಬಗ್ಗೆ ಗಮನಕ್ಕೆ ಬಂದಿದ್ದು, ತಕ್ಷಣ ಮೇಲಾಧಿಕಾರಿಗಳಿಗೆ ಸೂಚಿಸಿ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಮೇ ತಿಂಗಳೊಳಗೆ ಸೇಡಂ-ಚಿಂಚೋಳಿ ವ್ಯಾಪ್ತಿಯ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಜೆಜೆಎಂ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ತಹಶೀಲ್ದಾರ ಶ್ರೇಯಾಂಕ ಧನಶ್ರೀ, ಚಿಂಚೋಳಿ ತಹಶೀಲ್ದಾರ್ ಸುಬ್ಬಣ್ಣ ಜಮಖಂಡಿ, ಇಒ ಚನ್ನಣ್ಣ ರಾಯಣ್ಣನವರ್ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಯಾವುದೇ ಜಾನುವಾರು ಲಸಿಕೆಯಿಂದ ಬಿಟ್ಟು ಹೋಗದಿರಲಿ- ಡಾ. ಸುರೇಶ ಇಟ್ನಾಳ

ಕೊಪ್ಪಳ ಏ.10-

ಜಿಲ್ಲೆಯಲ್ಲಿ ಯಾವುದೇ ಜಾನುವಾರು ಕಾಲುಬಾಯಿ ರೋಗ ಲಸಿಕೆಯಿಂದ ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಪಶು ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು. 9ನೇ ಸುತ್ತಿನ ಕಾಲು-ಬಾಯಿ ರೋಗ ನಿಯಂತ್ರಣ ಕಾರ್ಯಕ್ರಮದ ಅನುಷ್ಠಾನದ ಕುರಿತು ಕೊಪ್ಪಳ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಏಪ್ರಿಲ್ 09ರಂದು ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ನಿರ್ವಹಣಾ ಸಮಿತಿಯ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.



ರಾಷ್ಟ್ರೀಯ ರೋಗ ನಿಯಂತ್ರಣ ಯೋಜನೆಯಡಿ 9ನೇ ಸುತ್ತಿನ ಕಾಲುಬಾಯಿ ರೋಗ ಲಸಿಕಾ ಕಾರ್ಯಕ್ರಮವು ಏಪ್ರಿಲ್ 23 ರಿಂದ ಆರಂಭವಾಗಲಿದ್ದು, ಈ ನಿಟ್ಟನಲ್ಲಿ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು, ಲಸಿಕಾ ತಂಡದ ಮುಖ್ಯಸ್ಥರು ಹಾಗೂ ಎಲ್ಲಾ ಲಸಿಕಾದಾರರು ತಮ್ಮ ತಮ್ಮ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಲಸಿಕಾ ಕಾರ್ಯಕ್ರಮದಲ್ಲಿ ಜಾನುವಾರುಗಳಲ್ಲಿ ವ್ಯತಿರಿಕ್ತ ಪರಿಣಾಮಗಳು ಉಂಟಾದಲ್ಲಿ, ಅದರ ನಿಯಂತ್ರಣಕ್ಕಾಗಿ ಅವಶ್ಯವಿರುವ ಔಷಧಿಗಳನ್ನು ದಾಸ್ತಾನಿಕರಿಸಲು ಅಗತ್ಯ ಕ್ರಮ ಕೈಗೊಳ್ಳಿ. ಜಾನುವಾರುಗಳಲ್ಲಿ ರೋಗನಿರೋಧಕ ಶಕ್ತಿ ವೃದ್ಧಿ ಬಗ್ಗೆ ನಿಗಾ ಇಡಲು ಲಸಿಕಾ ಪೂರ್ವ (0 ದಿವಸ) ಮತ್ತು ನಂತರ (28 ದಿವಸ) ಸೀರಂ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಕ್ಕೆ ಸಲ್ಲಿಸಬೇಕು. ಲಸಿಕಾ ಕಾರ್ಯಕ್ರಮದ ದೈನಂದಿನ ಲಸಿಕಾ ವರದಿಯನ್ನು ಆನ್‌ಲೈನ್ ನಲ್ಲಿ ಅದೇ ದಿನ ಭಾರತ ಪಶುಧನ ತಂತ್ರಾಂಶದಲ್ಲಿ ದಾಖಲಿಸುವಂತೆ ಸಂಬಂಧ ಪಟ್ಟ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ವ್ಯಾಪಕ ಪ್ರಚಾರಕ್ಕೆ ಕೈಗೊಳ್ಳಿ: ಆಕಾಶವಾಣಿ ಬಾನುಲಿ ಕೇಂದ್ರಗಳಲ್ಲಿ ಲಸಿಕಾ ಅಭಿಯಾನ ಕುರಿತಂತೆ ಪ್ರಚಾರಕೈಗೊಳ್ಳಬೇಕು. ಲಸಿಕಾ ಅಭಿಯಾನದ ಪ್ರಚಾರಕ್ಕೆ ಕರ ಪತ್ರಗಳನ್ನು ಹಂಚಬೇಕು. ಬ್ಯಾನರಗಳನ್ನು ಪ್ರದರ್ಶಿಸಬೇಕು. ಸ್ಥಳೀಯ ದಿನ ಪತ್ರಿಕೆಗಳಲ್ಲಿ ಪ್ರಕಟಣೆಗಳನ್ನು ಹೊರಡಿಸಿ ವ್ಯಾಪಕ ಪ್ರಚಾರ ಕೈಗೊಳ್ಳಬೇಕು. ಗ್ರಾಮದ ಗ್ರಾಮ ಪಂಚಾಯತಿ ಗೆ ಲಸಿಕೆಯ 2 ದಿನದ ಮುಂಚಿತವಾಗಿ ತಿಳಿಸಿ ಗ್ರಾಮ ಪಂಚಾಯತ್ ವತಿಯಿಂದ ಡಂಗುರ ಅಥವಾ ಟಾಂ ಟಾಂ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಬೇಕು. ಆಯಾ ತಾಲ್ಲೂಕಿನ ವಿಸ್ತರಣಾ ಅಧಿಕಾರಿಗಳು ಎಂ.ಪಿ.ಸಿ.ಎಸ್, ರೈತ ಸಂಪರ್ಕ ಕೇಂದ್ರ ಸಂಘ ಸಂಸ್ಥೆಗಳನ್ನು ಭೇಟಿ ಮಾಡಿ ಕಾಲು ಬಾಯಿ ಲಸಿಕಾ ಅಭಿಯಾನದ ಕುರಿತು ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.


ಶಿಷ್ಟಾಚಾರದಂತೆ ಕಾರ್ಯಕ್ರಮ ನಡೆಸಿ: ಈ ಲಸಿಕಾ ಕಾರ್ಯಕ್ರಮದ ಉದ್ಘಾಟನೆಯು ಶಿಷ್ಟಾಚಾರದಂತೆ ಎಲ್ಲಾ ಕಡೆಗಳಲ್ಲೂ ಅಚ್ಚುಕಟ್ಟಾಗಿ ನಡೆಯಬೇಕು. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಮಾನ್ಯ ಸಂಸದರು, ಮಾನ್ಯ ಸ್ಥಳೀಯ ವಿಧಾನ ಸಭಾ ಶಾಸಕರುಗಳು, ಚುನಾಯಿತ ಜನಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳನ್ನು ಆಹ್ವಾನಿಸಿ ಉದ್ಘಾಟನೆ ನೆರವೇರಿಸುವಂತೆ ಕಾರ್ಯಕ್ರಮಕ್ಕೆ ಏರ್ಪಾಡು ಮಾಡಲು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕರಾದ ಡಾ. ಪಿ.ಎಂ.ಮಲ್ಲಯ್ಯ ಅವರು ರಾಷ್ಟ್ರೀಯ ರೋಗ ನಿಯಂತ್ರಣ ಯೋಜನೆಯಡಿ 9ನೇ ಸುತ್ತಿನ ಕಾಲುಬಾಯಿ ನಿರೋಧಕ ಲಸಿಕಾ ಅಭಿಯಾನಕ್ಕಾಗಿ ಕೈಗೊಂಡ ಅಗತ್ಯ ಪೂರ್ವ ಸಿದ್ದತೆಗಳ ಕುರಿತು ಮಾಹಿತಿ ನೀಡಿ, ಪ್ರಸ್ತುತ ಕೊಪ್ಪಳ ಜಿಲ್ಲೆಯಲ್ಲಿ ದನ ಮತ್ತು ಎಮ್ಮೆ ಸೇರಿ ಒಟ್ಟು 2,38,376 ಜಾನುವಾರುಗಳಿವೆ. ಈ ಅಭಿಯಾನವು ಏ. 23 ರಿಂದ ಮೇ 22ರ ವರೆಗೆ ಒಟ್ಟು30 ದಿನ ಹಮ್ಮಿಕೊಳ್ಳಲಾಗಿದೆ ಎಂದರು.

★ಲಸಿಕೆ, ಸೀರಿಂಜ್ ನೀಡಲ್ಸ್‌ಗಳ ಶೇಖರಣೆ ಹಾಗೂ ಲಸಿಕಾದಾರರು:★ 9ನೇ ಸುತ್ತಿನ ಲಸಿಕಾ ಕಾರ್ಯಕ್ರಮಕ್ಕೆ ಅವಶ್ಯವಿರುವ 2.55 ಲಕ್ಷ ಡೋಸು ಲಸಿಕೆಯು ಈಗಾಗಲೆ ಆಯುಕ್ತಾಲಯದಿಂದ ಸ್ವೀಕೃತವಾಗಿದ್ದು, ಕಳೆದ ಸುತ್ತಿನ ಉಳಿಕೆ ಲಸಿಕೆಯು ಸೇರಿ ಒಟ್ಟು 2.62 ಲಕ್ಷ ಡೋಸು ಲಸಿಕೆಗಳನ್ನು ಶೇಖರಣೆಗಾಗಿ ಜಿಲ್ಲೆಯ 5 ವಾಕ್-ಇನ್ ಕೂಲರ್ ಮತ್ತು 29 ಐ.ಎಲ್.ಆರ್.ಗಳಲ್ಲಿ ಅಗತ್ಯ ಶೇಖರಣಾ ತಾಪಮಾನ ವ್ಯವಸ್ಥೆಯಡಿ ತಂಪು-ಸರಪಳಿಯಡಿ ಶೇಖರಿಸಲಾಗಿದೆ. ಅದೇ ರೀತಿ ಈಗಾಗಲೇ 3.16 ಲಕ್ಷ ಸೀರಿಂಜ್ ಹಾಗೂ ನೀಡಲ್ಸ್‌ಗಳು ಸರಬುರಾಜಾಗಿದ್ದು, ಲಭ್ಯ ಜಾನುವಾರುಗಳ ಸಂಖ್ಯೆಗಳಿಗನುಗುಣವಾಗಿ ಆಯಾ ತಾಲ್ಲೂಕುಗಳಿಗೆ ವಿತರಿಸಲಾಗಿರುತ್ತದೆ. ಈ ಲಸಿಕಾ ಕಾರ್ಯಕ್ರಮಕ್ಕಾಗಿ ಒಟ್ಟು 195 ಲಸಿಕಾದಾರರನ್ನು ಗುರುತಿಸಲಾಗಿದ್ದು, ಲಸಿಕಾದಾರರಿಗೆ ಆದೇಶ ಜಾರಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಲಸಿಕಾ ಕಾರ್ಯಕ್ರಮದ ಶೆಡ್ಯೂಲ್ ಮತ್ತು ಮೈಕ್ರೋಪ್ಲಾನ್: ಇಲಾಖೆಯಲ್ಲಿ ಲಭ್ಯವಿರುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಹಾಗೂ ಇಲಾಖೇತರ ಲಸಿಕೆದಾರರನ್ನು ಬಳಸಿಕೊಂಡು ಏ. 23 ರಿಂದ ಮೇ 22ರ ವರೆಗೆ ಒಟ್ಟು 30 ದಿನಗಳ ಅವಧಿಗೆ ದಿನಾಂಕವಾರು ಹಾಗೂ ಗ್ರಾಮವಾರು ಪೂರ್ಣ ವೇಳಾಪಟ್ಟಿಯನ್ನು ತಯಾರಿಸಿ ಲಸಿಕಾ ಕಾರ್ಯಕ್ರಮವನ್ನು ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಪ್ರತಿ 100 ರಿಂದ 120 ಜಾನುವಾರುಗಳಿಗೆ ಒಂದು ಬ್ಲಾಕ್‌ನಂತೆ ಗ್ರಾಮವಾರು ಬ್ಲಾಕ್ ರಚಿಸಿ ಮೈಕ್ರೋಪ್ಲಾನ್‌ನ್ನು ತಯಾರಿಸಲಾಗುತ್ತಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯ ಕೀಯ ಸೇವಾ ಇಲಾಖೆಯ ಉಪನಿರ್ದೇಶಕರು ಸಭೆಯಲ್ಲಿ ಮಾಹಿತಿ ನೀಡಿದರು. ಸಭೆಯಲ್ಲಿ ಮುಖ್ಯ ಪಶುವೈದ್ಯಾಧಿ ಕಾರಿ ಡಾ. ಬಸಯ್ಯ ಸಾಲಿ, ಡಾ. ಪ್ರಕಾಶ ಚೂರಿ, ಡಾ. ಜಾಕೀರ ಹುಸೇನ್, ಡಾ. ಆನಂದ ದೇವರನಾವದಗಿ, ಡಾ. ಚನ್ನಬಸಪ್ಪ ಹಳ್ಳದ, ಡಾ. ವಿನೋದ ಕುಮಾರ ದಿವಟರ್ ಕೆಎಂಎಫ್ ಅಧಿಕಾರಿ ಕಾಸಿಂಸಾಬ್, ಪಶುವೈದ್ಯಕೀಯ ಪರಿವೀಕ್ಷಕರಾದ ಮಹಮ್ಮದ ರಫಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಸ್ಮಶಾನ ಭೂಮಿ ನೀಡುವಂತೆ ಆಗ್ರಹಿಸಿ ರಸ್ತೆ ಮೇಲೆ ಮೃತದೇಹವಿಟ್ಟು ಪ್ರತಿಭಟನೆ



ಯಡ್ರಾಮಿ,ಏ.10-

ಸ್ಮಶಾನಭೂಮಿ ಇಲ್ಲದ ಕಾರಣ ಅಂತ್ಯಕ್ರಿಯೆಗೆ ತೊಂದರೆಯಾಗುತ್ತಿದೆ ಎಂದು ಆಗ್ರಹಿಸಿ ತಾಲೂಕಿನ ಯತ್ನಾಳ ಗ್ರಾಮಸ್ಥರು ರಸ್ತೆ ಮೇಲೆ ಮೃತದೇಹವನ್ನು ಇಟ್ಟು ಪ್ರತಿಭಟನೆ ನಡೆಸಿದ ಘಟನೆ ಬುಧವಾರ ನಡೆದಿದೆ.

ಗ್ರಾಮದಲ್ಲಿ ಅಂತ್ಯಕ್ರಿಯೆಗೆ ನಿರ್ದಿಷ್ಟ ಸ್ಥಳವಿಲ್ಲದ ಕಾರಣ ಜಮಿನು ಇದ್ದವರು ಸ್ವಂತ ಜಮೀನಿನಲ್ಲಿ ಶವಸಂಸ್ಕಾರ ಮಾಡುತ್ತಿದ್ದಾರೆ. ಆದರೆ, ಜಮೀನು ಇಲ್ಲದ ಬಡವರು ಊರ ಹೊರಗೆ ಬೇರೆಯವರ ಹೊಲಗಳಲ್ಲಿ ಅಂತ್ಯಸಂಸ್ಕಾರ ನೆರವೇರಿಸುತ್ತಾ ಬಂದಿದ್ದಾರೆ.


ಈ ನಡುವೆ ಗ್ರಾಮದ ನಿವಾಸಿ ಚಂದಪ್ಪ ಬಡಿಗೇರ ನಿಧನರಾದರು. ರೂಢಿಯಂತೆ ಊರಿಗೆ ಹೊಂದಿಕೊಂಡಿರುವ ಜಮೀನಿನಲ್ಲಿ ಅಂತ್ಯಸಂಸ್ಕಾರ ಮಾಡಲು ಮುಂದಾದಾಗ ಆಗ ಜಮೀನು ಮಾಲಕರು ಬೇಡ ಎಂದು ನಿರಾಕರಿಸಿದ್ದು, ಇದರಿಂದ ಗ್ರಾಮಸ್ಥರು ಮೃತದೇಹವನ್ನು ರಸ್ತೆ ಮೇಲಿಟ್ಟು ಪ್ರತಿಭಟನೆ ನಡೆಸಿ ಸ್ಮಶಾನಭೂಮಿ ನೀಡುವಂತೆ ಆಗ್ರಹಿಸಿದ್ದಾರೆ ಎಂದು ತಿಳಿದು ಬಂದಿದೆ. ಸ್ಮಶಾನಭೂಮಿ ಇಲ್ಲದ್ದರಿಂದ ಯಾರಾದರೂ ಮೃತಪಟ್ಟರೆ ಅಂತ್ಯಸಂಸ್ಕಾರಕ್ಕೆ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಹಲವು ಬಾರಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದ್ದರೂ, ಯಾವುದೇ ಕ್ರಮವಾಗಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ವಿಷಯ ತಿಳಿದು ತಹಶೀಲ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದರೂ, ಗ್ರಾಮಸ್ಥರು ಸ್ಮಶಾನಭೂಮಿಗೆ ನಿರ್ದಿಷ್ಟ ಜಾಗ ನೀಡುವವರೆಗೆ ಅಂತ್ಯಸಂಸ್ಕಾರ ಮಾಡುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತರು. ಬಳಿಕ ಗ್ರಾಮದ ಯಮನಗೌಡ ಮಾಲಿಪಾಟೀಲ ಅವರು ತಮ್ಮ ಜಮೀನಿನಲ್ಲಿ ಅಂತ್ಯಸಂಸ್ಕಾರ ಮಾಡುವಂತೆ ಮನವೊಲಿಸಿದ ನಂತರವಷ್ಟೇ ಪ್ರತಿಭಟನೆ ಹಿಂಪಡೆಯಲಾಗಿದೆ. ಆದಷ್ಟು ಬೇಗ ಗ್ರಾಮಕ್ಕೆ ಸ್ಮಶಾನಭೂಮಿಗೆ ಜಾಗ ನೀಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ತಹಶೀಲ್ ಕಚೇರಿಯ ಮುಂದೆ ಮೃತದೇಹವಿಟ್ಟು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದ್ದಾರೆ. ಈ ವೇಳೆ ಶರಣಗೌಡ ಪೊಲೀಸ್‌ಪಾಟೀಲ, ಬಸವರಾಜಗೌಡ ಗೊಲ್ಲಾಳಪ್ಪ ಕೋಣಸಿರಸಗಿ, ಸೋಮಪ್ಪ ಮಾಂತಪ್ಪ ಶರಣಪ್ಪ ದೊಡಮನಿ, ಈರಪ್ಪ ಸಂಗಪ್ಪ ಬಡಗೇರ, ನಾಗಪ್ಪ ಸೋಮಪ್ಪ ಬಡಗೇರ ಸೇರಿದಂತೆ ಇತರಿದ್ದರು.

# ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಬಿಜೆಪಿ ನಾಯಕರು ಮನಬಂದಂತೆ ಮಾತನಾಡುವುದು ಸರಿಯಲ್ಲ : ಡಾ.ಶರಣಪ್ರಕಾಶ್ ಪಾಟೀಲ್

ಕಲಬುರಗಿ ,ಏ.10-

'ಮಲ್ಲಿಕಾರ್ಜುನ ಖರ್ಗೆ ಅವರು ಘನತೆ, ಗೌರವ ಹಾಗೂ ಸಮಾಜ ನಿರ್ಮಾಣದ ಕೆಲಸಗಳನ್ನು ಮಾಡಿದ್ದಾರೆ. ಕೆಲ ಬಿಜೆಪಿ ನಾಯಕರು ಮನಬಂದಂತೆ ಮಾತನಾಡುವುದು ಸರಿಯಲ್ಲ'' ಎಂದು ವೈದ್ಯಕೀಯ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರು ಹೇಳಿದ್ದಾರೆ.



ಗುರುವಾರ ನಗರದಲ್ಲಿರುವ ತಮ್ಮ ಸ್ವಗೃಹದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬಿಜೆಪಿಯ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ಅವರು ಮಲ್ಲಿಕಾರ್ಜುನ್ ಖರ್ಗೆ ಅವರ ಬಗ್ಗೆ ಹಗುರವಾಗಿ ಮಾತನಾಡಿರುವುದನ್ನು ತೀವ್ರವಾಗಿ ಖಂಡಿಸಿದರು.

ಅಸ್ಸಾಂನಲ್ಲಿ ಬಿಜೆಪಿ ಮತ್ತು ಆರೆಸ್ಸೆಸ್ ಅನ್ನು ''ವಿಷ ಸರ್ಪ'' ಎಂದು ಹೇಳಿದ ವಿಷಯವನ್ನು ದೊಡ್ಡ ವಿವಾದವನ್ನಾಗಿ ಮಾಡಿರುವುದು ಅಸಂಬದ್ಧ ಎಂದು ಅವರು ಅಭಿಪ್ರಾಯಪಟ್ಟರು. ''ಈ ಹಿಂದೆ ಪ್ರಧಾನಿ ಮೋದಿ ಅವರು ಕಾಂಗ್ರೆಸ್ ನಾಯಕರನ್ನು ಅರ್ಬನ್ ನಕ್ಸಲ್ ಎಂದು ಕರೆದು, ಸೋನಿಯಾ ಗಾಂಧಿ, ಜವಾಹರಲಾಲ್ ನೆಹರು ಸೇರಿದಂತೆ ಹಲವರ ಬಗ್ಗೆ ಟೀಕೆ ಮಾಡಿದ್ದಾರೆ. ಈಗ ಖರ್ಗೆ ಅವರ ಹೇಳಿಕೆಯನ್ನು ದೊಡ್ಡ ವಿಷಯ ಮಾಡುವುದು ಸರಿಯಲ್ಲ,'' ಎಂದು ಹೇಳಿದರು.

ಇದೇ ವೇಳೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನೂ ಟೀಕಿಸಿ, ''ಅಮಿತ್ ಶಾ ಅವರು ನೆಹರು ಅವರನ್ನು ಅನೇಕ ಬಾರಿ ಟೀಕಿಸಿದ್ದಾರೆ. ನೆಹರು ಅವರ ಸರಿಸಾಟಿ ಇದ್ದಾರಾ? ಇಂದು ಪ್ರಶ್ನಿಸಿದರು.

ಬಿಜೆಪಿಯಲ್ಲಿರುವವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು ಕಡಿಮೆ ಎಂದು ಆರೋಪಿಸಿದ ಅವರು, ''ನಾವು ಹೇಟ್ ಸ್ಪೀಚ್ ಮಾಡಿಲ್ಲ. ನಮ್ಮ ಕೆಲಸದ ಬಗ್ಗೆ ಟೀಕೆ ಮಾಡಲಿ, ವೈಯಕ್ತಿಕ ಟೀಕೆ ಬೇಡ'' ಎಂದು ಹೇಳಿದರು.

ನೆಹರೂ, ವಲ್ಲಭ ಭಾಯಿ ಪಟೇಲ್ ಸೇರಿದಂತೆ ಅನೇಕ ನಾಯಕರು ವೈತ್ರಿ ರಹಿತ ನೀತಿಯನ್ನು ಮುನ್ನಡೆಸಿಕೊಂಡು ಬಂದವರು. ಯಾವುದೋ ಒಂದು ದೇಶ ಇನ್ನೊಂದು ದೇಶದ ವಿರುದ್ಧ ದಾಳಿ ನಡೆಸಿದರೆ ಖಂಡಿಸುತ್ತಿದ್ದರು. ಯುದ್ಧಕ್ಕೆ ಬೆಂಬಲಿಸುತ್ತಿರಲಿಲ್ಲ. ಆದರೆ ಪ್ರಧಾನಿ ಮೋದಿ ಅವರು ಒಂದೇ ಸೈಡ್ ತಗೊಂಡಿದ್ದಾರೆ. ಇರಾನ್ ಮೇಲೆ ದಾಳಿ ನಡೆಸಿದಾಗ ಇಸ್ರೇಲ್ ಗೆ ಯಾಕೆ ಹೋಗಬೇಕಿತ್ತು? ಎಂದು ಪ್ರಶ್ನಿಸಿದ ಅವರು, ಈ ರೀತಿಯ ತಪ್ಪು ವಿದೇಶಾಂಗ ನೀತಿಯಿಂದಾಗಿ ವೈದ್ಯಕೀಯ ಕ್ಷೇತ್ರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಮಸ್ಯೆಗಳು ಉಂಟಾಗಿವೆ ಎಂದರು.

## ಒಂದನೇಯ ಪುಟದಿಂದ

## ಮಥುರಾದಲ್ಲಿ ದುರಂತ: ದೋಣಿ ಮಗುಚಿ 10 ಯಾತ್ರಿಕರ ಸಾವು, ಹಲವರು ನಾಪತ್ತೆ

ಡ್ರೈವರ್‌ಗಳು ಮತ್ತು ದೋಣಿ ಚಾಲಕರು ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್‌ನ ತಂಡಗಳು ಸಹ ಇದೆ. ಕಾಣೆಯಾದ ವ್ಯಕ್ತಿಗಳಿಗಾಗಿ ಪ್ರಸ್ತುತ ಹುಡುಕಾಟ ನಡೆಯುತ್ತಿದೆ ಎಂದು ಮಥುರಾ ಡಿಐಜಿ ಶೈಲೇಶ್ ಕುಮಾರ್ ಪಾಂಡೆ ಮಾಹಿತಿ ನೀಡಿದ್ದಾರೆ.

## ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಅವಹೇಳನ ಖಂಡನೀಯ

ಸುದ್ದಿಗೋಷ್ಠಿಯಲ್ಲಿ ಬಸವರಾಜ್ ಪಾಟೀಲ ಇಟಗಿ, ಎಂ.ಕೆ. ಬಾಬರ್, ರಝುಕ್ ಉಸ್ತಾದ್, ಅಸ್ಲಾಂ ಪಾಷಾ, ಟಿ. ಮಾರೆಪ್ಪ, ದರೂರು ಬಸವರಾಜ್, ಡಿ.ಕೆ. ಮುರಳಿ ಯಾದವ್, ಅಬ್ದುಲ್ ಕರೀಂ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ರಾಯಚೂರು: ಲಂಚ ಸ್ವೀಕರಿಸುವಾಗ ಲೋಕಾಯುಕ್ತ ಬಲೆಗೆ ಬಿದ್ದ ಸಿರವಾರ ಮುಖ್ಯಾಧಿಕಾರಿ; ಸಿನಿಮೀಯ ಬೆನ್ನಟ್ಟಿ ಬಂಧನ!

ಕವಿತಾಳದಲ್ಲಿರುವ ತಮ್ಮ ಸ್ನೇಹಿತನ ಮನೆಯಲ್ಲಿ ಅಡಗಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ಇದನ್ನು ಬೆನ್ನಟ್ಟಿದ ಅಧಿಕಾರಿಗಳು ಕವಿತಾಳದ ಮನೆಯ ಮೇಲೆ ದಾಳಿ ನಡೆಸಿ ಅವರನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

## ಬಯ್ಯಾಪೂರು ಕಾಲೇಜಿಗೆ ಉತ್ತಮ ಫಲಿತಾಂಶ

ವಿಭಾಗ ಸೇರಿ 114. ಇದರಲ್ಲಿ ಒಟ್ಟು ಉತ್ತೀರ್ಣರಾದವರು=92. ಕಾಲೇಜಿನ ಒಟ್ಟು ಶೇಕಡವಾರು ಫಲಿತಾಂಶ .80.70% ಆಗಿದೆ ಎಂದು ಪ್ರಾಚಾರ್ಯರಾದ ಅಮರೇಶ ನಂದರೆಡ್ಡಿ ತಿಳಿಸಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಅದ್ಯಕ್ಷರಾದ ವಿರುಪಾಕ್ಷಿ ಗೌಡ ಸದಸ್ಯರು ಅಭಿನಂದನೆ ತಿಳಿಸಿದ್ದಾರೆ.

## ಸಿರವಾರ: ಗುತ್ತಿಗೆ ಪದ್ಧತಿ ರದ್ದು, ಕನಿಷ್ಠ ವೇತನ ಹೆಚ್ಚಳಕ್ಕೆ ಒತ್ತಾಯಿಸಿ ರಸ್ತೆ ತಡೆ

ಗಳು ಸೇರಿದಂತೆ ಅನೇಕ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಗುತ್ತಿಗೆ ಕಾರ್ಮಿಕರಿಗೆ ಕಾನೂನುಬದ್ಧ ವೇತನ ನೀಡಲಾಗುತ್ತಿಲ್ಲ ಎಂದು ಅವರು ಆರೋಪಿಸಿದರು.

ಈ ಸಂದರ್ಭದಲ್ಲಿ ತುಂಗಭದ್ರಾ ನೀರಾವರಿ ಕಾರ್ಮಿಕರ ಸಂಘದ ಕೇಂದ್ರ ಸಮಿತಿಯ ಅಧ್ಯಕ್ಷರಾದ ಕೆ ನಾಗಲಿಂಗ ಸ್ವಾಮಿ, ವಿಭಾಗದ ಅಧ್ಯಕ್ಷ ರಾಜಾಸಾಬ್, ಉಪ ವಿಭಾಗದ ಅಧ್ಯಕ್ಷರಾದ ವೆಂಕಟೇಶ್ ಕೋರಿ, ಈಶಪ್ಪ ಗೌಡ, ಚಂದು ಸಾಬ್, ಗೋಪಾಲ ರಾವ್, ನಾಗರಾಜ್ ಮಡಿವಾಳ, ಶಿವಪುತ್ರಪ್ಪ, ಹನುಮಂತ ನಾಯಕ, ನಾಗಲಿಕರ್ ಸೇರಿದಂತೆ ನೂರಾರು ಕಾರ್ಮಿಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಜಯಂತಿ ಪೂರ್ವಭಾವಿ ಸಭೆ ಶಂಕರಾಚಾರ್ಯ ಜಯಂತಿ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಿ: ಶಿವಾನಂದ

ಮಂತ, ಶಿವಪ್ರಸಾದ್, ರಮೇಶ ಕುಮಾರ್, ಚಂದ್ರಶೇಖರ ವಿದ್ಯಾ, ವಿಷ್ಣುವರ್ಧನ, ವಿನೋಧ ಸಾಗರ್, ಜಯ ಕುಮಾರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.

## ಕಲಾ ಸಂಕುಲ ಸಂಸ್ಥೆಯಿಂದ ಸನ್ಮಾನ

ತಮ್ಮ ಕಲಾತ್ಮಕ ಪಾತ್ರಗಳಿಗೆ ಹೆಸರಾಗಿರುವ ಅಶೋಕ್ ಸನಾದಿ ಅಪ್ಪಣ್ಣ.ರಂಗನಾಯಕಿ. ಕ್ರಾಂತಿಯೋಗಿ ಬಸವಣ್ಣ.ಮುಗಿಲ ಮಲ್ಲಿಗೆ.ಮನೆಗೆ ಬಂದ ಮಹಾಲಕ್ಷ್ಮಿ ಅಶೋಕ ಚಕ್ರ.ವರದಕ್ಷಿಣೆ ತಾಯಿಯ ಮಡಿಲಲ್ಲಿ ಹಲವಾರು ಚಲನಚಿತ್ರದಲ್ಲಿ ನಟರಾಗಿ ನಟಿಸಿರುವ ಅಶೋಕ್ ಅವರು ಇಂದು ರಾಯಚೂರಿಗೆ ಆಗಮಿಸಿದ್ದರು. ಕಲಾ ಸಂಕುಲ ಸಂಸ್ಥೆ 2011ರಲ್ಲಿ ರಾಯಚೂರಿನಲ್ಲಿ ದೇಶಿ ಸಂಭ್ರಮ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಅಶೋಕ್ ಅವರನ್ನು ಆಹ್ವಾನಿಸಲಾಗಿತ್ತು. ಬಹು ವರ್ಷಗಳ ನಂತರ ಮತ್ತೆ ರಾಯಚೂರಿಗೆ ಬಂದಿದ್ದು ತುಂಬಾ ಖುಷಿಯಾಯಿತು ಎಂದು ಅವರು ನೆನಪಿಸಿಕೊಂಡು ಮಾತನಾಡಿದರು. ಈ ಸಂದರ್ಭದಲ್ಲಿ ಕಲಾ ಸಂಕುಲ ಸಂಸ್ಥೆಯ ನಿರ್ದೇಶಕರಾದ ಮೌನೇಶ ವಡವಾಟಿ. ಡಾ. ಷಣ್ಮುಖ ಚಲವಾದಿ ಇನ್ನಿತರರಿದ್ದರು. ರೇಖಾ ಬಡಿಗೇರ್ ಬರೆದಿರುವ ಉದೋ ಉದೋ ಕೃತಿಯನ್ನು ನಟ ಅಶೋಕ್ ಅವರಿಗೆ ಕೊಡಲಾಯಿತು.

## ಜಮುಖಂಡಿ ನಗರದಲ್ಲಿ ಅರಣ್ಯಕ್ಕೆ ಬೆಂಕಿ; 5 ಏಕರೆ ಪ್ರದೇಶ ಭಸ್ಮ

ಜಮುಖಂಡಿ: ಏ.9: ನಗರದ ಅಡಗಲ ಪೀರ ದರ್ಗಾ ಹತ್ತಿರದ ಅರಣ್ಯ ಪ್ರದೇಶದಲ್ಲಿ ಭಾರೀ ಅಗ್ನಿ ಅವಘಡ ಸಂಭವಿಸಿ ಸುಮಾರು 5 ಏಕರೆಗೂ ಅಧಿಕ ಅರಣ್ಯ ಪ್ರದೇಶ ಬೆಂಕಿಗೆ ಆಹುತಿಯಾಗಿದೆ.

ಘಟನೆಯ ಮಾಹಿತಿ ತಿಳಿದು ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳು, ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಸ್ಥಳೀಯರು ಸ್ಥಳಕ್ಕೆ ದೌಡಾಯಿಸಿ ಬೆಂಕಿ ನಂದಿಸುವ ಕಾರ್ಯದಲ್ಲಿ ತೊಡಗಿದರು. ಹಲವಾರು ಗಂಟೆಗಳ ಪ್ರಯತ್ನದ ನಂತರ ಬೆಂಕಿಯನ್ನು ನಿಯಂತ್ರಣಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಅವಘಡದಿಂದ ಸುಮಾರು 5 ಏಕರೆ ಅರಣ್ಯ ಪ್ರದೇಶ ಸುಟ್ಟು ಭಸ್ಮವಾಗಿದ್ದು, ಬೆಂಕಿ ಕಾಣಿಸಿಕೊಂಡ ಕಾರಣ ಇನ್ನೂ ಸ್ಪಷ್ಟವಾಗಿಲ್ಲ.

## ಅನಿರ್ದಿಷ್ಟಾವಧಿ ಧರಣಿ 44ನೇ ದಿನಕ್ಕೆ

ತಾಳಿಕೋಟಿ,ಏ.10-

ತಾಲೂಕಿನ ವ್ಯೈಲೇಶ್ವರ ಗ್ರಾಮದ ಸಮೀಪ ಪ್ರಜಾಸೌಧ ನಿರ್ಮಾಣಕ್ಕೆ ಗುರುತಿಸಲಾದ ಸ್ಥಳದ ವಿರುದ್ಧ ಹಾಗೂ ಪಟ್ಟಣದ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಬೇಕೆಂದು ಆಗ್ರಹಿಸಿ ನಡೆಯುತ್ತಿರುವ ಅನಿರ್ಧಿಷ್ಟವಾಧಿ ಧರಣಿಸತ್ಯಗ್ರಹವು 44 ದಿನಕ್ಕೆ ಕಾಲಿಟ್ಟಿದೆ.



ಬೊಮ್ಮನಹಳ್ಳಿ ಗ್ರಾಮದ ಮಾರುತೇಶ್ವರ ಯುವಕ ಮಂಡಳಿ ಸಂಘದ ಸದಸ್ಯರು ಸಂಪೂರ್ಣ ಬೆಂಬಲ ಘೋಷಿಸಿ, ಧರಣಿಯಲ್ಲಿ ಭಾಗವಹಿಸಿದರು. ಬೊಮ್ಮನಹಳ್ಳಿಯ ಯುವ ಮುಖಂಡರಾದ ಜಗನ್ನಾಥ ಮಸರಕಲ್ಲ ಹಾಗೂ ಸಿದ್ದಪ್ಪ ಕಟ್ಟಿಮನಿ ಮಾತನಾಡಿದರು. ಧರಣಿಯಲ್ಲಿ ಬೊಮ್ಮನಹಳ್ಳಿ ಗ್ರಾಮದ ಪ್ರಮುಖರಾದ ಬಸವರಾಜ ಕೊಂಡಗೂಳಿ, ಸಂಗಣ್ಣ ಬಿರಾದಾರ, ವಿಟ್ಟಪ್ಪ ಡೊರನಹಳ್ಳಿ, ಶಿವಲಿಂಗ ಮಸರಕಲ, ವರುಣ್ ಕಟ್ಟಿಮನಿ, ಖಾನಸಾಬ್ ಗುತ್ತಿಹಾಳ, ಮಲ್ಲು ಕಲಬುರ್ಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಹೋರಾಟ ಸ'ವಿ೦ತಿಯ೦ ಅಧ್ಯಕ್ಷ ದಶರಥ 'ಸಿಂಗ್ ಮನಗೂಳಿ, ಎಸ್.ಬಿ. ಕಟ್ಟಿಮನಿ, ಆರ್ ಎಸ್ ಪಾಟೀಲ (ಕೂಚಬಾಳ) ಮುತ್ತಪ್ಪ ಚಮಲಾಪುರ, ಕಾಶೀನಾಥ ಮುರಾಳ, ಮುರಿಗೆಪ್ಪ ಸರಶೆಟ್ಟಿ, ದತ್ತು ಹೆಬಸೂರ, ಪರಶುರಾಮ ತಂಗಡಗಿ, ನಾಗೇಶ ಕಟ್ಟಿಮನಿ, ದೇವೇಂದ್ರ ಹಾದಿಮನಿ, ವಿಜಯಸಿಂಗ್ ಹಜೇರಿ, ಮಹೇಶ ಛಲವಾದಿ, ಪ್ರಕಾಶ್ ಹಜೇರಿ ಮುದಕಪ್ಪ ಬಡಿಗೇರ, ಸಿರಸಕುಮಾರ ಹಜೇರಿ, ಮಲ್ಲು ಮೇಟಿ, ಸದ್ದಾಂ ಹುಸೇನ್ ಬೀಳಗಿ, ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಜನರ ಅಹವಾಲುಗಳಿಗೆ ಶಾಸಕರ ಸ್ಪಂದನೆ

ಇಂಡಿ,ಏ.10-

ಇಂಡಿ,ನಗರದ ಪ್ರವಾಸಿ ಮಂದಿರದಲ್ಲಿ ಶಾಸಕ ಯಶವಂತರಾಯಗೌಡ ಪಾಟೀಲ್ ಅವರ ಮತ ಕ್ಷೇತ್ರದ ವಿವಿಧ ಗ್ರಾಮದಿಂದ ಬಂದತಂಹ ಗ್ರಾಮಸ್ಥರ ಅಹವಾಲುಗಳನ್ನು ಸ್ವೀಕರಿಸಿ ಸ್ಪಂದಿಸಿದರು.

ಸಮಸ್ಯೆ ಆಲಿಸಿದ ಶಾಸಕರು ವಿವಿಧ ಸರ್ಕಾರಿ ಇಲಾಖೆಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ದೂರವಾಣಿ ಕರೆ ಮಾಡಿ ತಕ್ಷಣವೇ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಸೂಚನೆ ನೀಡಿದರು.

ಕೆಲವು ಗಂಭೀರ ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಜೊತೆಗೆ ಖುದ್ದಾಗಿ ಚರ್ಚೆ ಮಾಡಿ ಬಗೆಹರಿಸುವುದಾಗಿ ಭರವಸೆ ನೀಡಿದರು. ಹಿಂಗಣೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಪಿ.ಜೆ.ಪ್ಯಾಟಿ, ಕಾಂಗ್ರೆಸ್ ಮುಖಂಡ ಶಿವಯೋಗೆಪ್ಪ ಚನಗೊಂಡ, ಜಿಲ್ಲಾ ಗ್ಯರಂಟಿ ಸಮಿತಿ ಅಧ್ಯಕ್ಷ ಇಲಿಯಾಸ್ ಬೋರಾಮಣಿ, ಮಾಜಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಾವೀದ ಮೋಮಿನ್, ಲಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕವಲಗಿ, ತಾಲ್ಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಪ್ರಶಾಂತ ಕಾಳೆ ಇದ್ದರು.

# ರೈತರ ಏಳಿಗೆಗೆ ಸರಕಾರ ಬದ್ಧ: ಸಚಿವ ಪ್ರಿಯಾಂಕ್ ಖರ್ಗೆ



ಚಿತ್ತಾಪುರ,ಏ.10-

ಕಾಂಗ್ರೆಸ್ ಸರ್ಕಾರ ರೈತರ ಏಳಿಗೆಗೆ ಶ್ರಮಿಸುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ತೋಟಗಾರಿಕೆ ಇಲಾಖೆ ಸಂಯುಕ್ತಾಶ್ರಯದಲ್ಲಿ ಚಿತ್ತಾಪುರ ಪಟ್ಟಣದ ಬಜಾಜ್ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ 2025-26 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅನುದಾನದಡಿ ತೋಟಗಾರಿಕೆ ಇಲಾಖೆಯಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ತರಕಾರಿ ಬೀಜಗಳ ಕಿಟ್ ವಿತರಿಸಿ ಅವರು ಮಾತನಾಡಿದರು.

ನಮ್ಮ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ರೈತರಿಗೆ 2,590 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದ್ದೇವೆ. ಇದರಲ್ಲಿ 656 ಕೋಟಿ ರೂ. ಬೆಳೆ ವಿಮೆ ಸೇರಿದೆ. ಇಷ್ಟೊಂದು ಮೊತ್ತದ ಪರಿಹಾರ ಪಡೆದುಕೊಂಡ ಜಿಲ್ಲೆ ರಾಜ್ಯದಲ್ಲಿ ಮತ್ತೊಂದಿಲ್ಲ. ಜಿಲ್ಲೆಯಲ್ಲಿ ತೊಗರಿಗೆ ನೆಟೆ ರೋಗ ಬಂದು 2 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾದಾಗ 182 ಕೋಟಿ ರೂ. ಬಿಡುಗಡೆ ಮಾಡಿದ್ದೇವೆ. ಆದರೆ, ಇದೇ ತರ ಜಿಲ್ಲೆಯ ರೈತರು ನೆರೆ ಹಾಗೂ ಬರದಿಂದ ನಷ್ಟ ಅನುಭವಿಸಿದಾಗ ಅಂದಿನ ಬಿಜೆಪಿ ಸರ್ಕಾರ ಜಿಲ್ಲೆಗೆ ಕೇವಲ 22 ಕೋಟಿ ರೂ. ಮಾತ್ರ ಬಿಡುಗಡೆ ಮಾಡಿತ್ತು ಎಂದು ಹೇಳಿದರು.

ಕೇಂದ್ರ ಸರ್ಕಾರ ರೈತ ವಿರೋಧಿ ನಿಲುವು ತೆಗೆದುಕೊಂಡು ಬಿಡುಗಡೆ ಮಾಡಬೇಕಾದ ಅನುದಾನ ತಡೆಹಿಡಿದಿದ್ದರಿಂದ ರಾಜ್ಯದ ಇಡೀ ಸಚಿವ ಸಂಪುಟ ದೆಹಲಿಯಲ್ಲಿ ಪ್ರತಿಭಟನೆ ಮಾಡಿತ್ತು. ಇತಿಹಾಸದಲ್ಲಿ ರಾಜ್ಯ ಸರ್ಕಾರವೊಂದು ಕೇಂದ್ರದ ವಿರುದ್ಧ ಪ್ರತಿಭಟನೆ ಮಾಡಿದ್ದು ಇದೇ ಮೊದಲು. ಅಷ್ಟಾದರೂ ಕೇಂದ್ರ ಬಗ್ಗದಿದ್ದಾಗ ಕೊನೆಗೆ ರಾಜ್ಯ ಸರ್ಕಾರ ಸುಪ್ರಿಂ ಕೋರ್ಟ್ ಗೆ ಅರ್ಜಿ ಹಾಕಿದಾಗ ಸುಪ್ರಿಂ ಕೋರ್ಟ್ ಛೀಮಾರಿ ಹಾಕಿದ್ದರಿಂದ ಅನುದಾನ ಬಿಡುಗಡೆ ಮಾಡಿತ್ತು. ಇದು ರೈತರ ಪರವಾದ ನಮ್ಮ ಬದ್ದತೆಗೆ ಸಾಕ್ಷಿಯಾಗಿದೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದರು.

ಕೋಲ್ಡ್ ಸ್ಟೋರೆಜ್ ನಿರ್ಮಾಣ ಮಾಡುವ ಗುರಿ ಹೊಂದಿದ್ದೇವೆ. ಪಲ್ ಪ್ರೋಟಿನ್ ಹಬ್ ಮಾಡುವ ಯೋಜನೆಗಳಿವೆ. ಈಗಾಗಲೇ ಡ್ರೋನ್ ಮೂಲಕ ಕೀಟನಾಶಕ ಸಿಂಪಡಣೆ ಮಾಡುವ ಯಂತ್ರಗಳನ್ನು ಪರಿಚಯಿಸಲಾಗಿದೆ. ಇನ್ನು ಮುಂದೆಯೂ ಕೂಡಾ ತಂತ್ರಜ್ಞಾನ ಬಳಕೆ ಮಾಡಿಕೊಂಡು ರೈತರಿಗೆ ಮತ್ತಷ್ಟು ಸುಧಾರಿತ ಯಂತ್ರಗಳನ್ನು ಒದಗಿಸಲಾಗುವುದು ಎಂದರು.

ಈ ವೇಳೆ ಪ್ರಗತಿಪರ ರೈತರಿಗೆ ಸನ್ಮಾನಿಸಲಾಯಿತು. ಜೊತೆಗೆ ಡಿಎಪಿ ಬದಲಿಗೆ ಸಾವಯವ ಗೊಬ್ಬರ ಬಳಕೆ ಕುರಿತಂತೆ ಮಾಹಿತಿ ಒದಗಿಸುವ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ವೇದಿಕೆಯ ಮೇಲೆ ಎಂಎಲ್ಸಿ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಸೈಯದ್ ಮಹೆಮೂದ್ ಚಿಸ್ತಿ ಸಾಹೇಬ್, ಜಿಲ್ಲಾಧಿಕಾರಿ ಫೌಝಿಯಾ ತರನ್ನುಮ್, ಸಿಇಒ ಭಂವರ್ ಸಿಂಗ್ ಮೀನಾ, ಎಸ್ಪಿ ಅಡ್ದೂರು ಶ್ರೀನಿವಾಸಲು, ನಾಗರೆಡ್ಡಿ ಪಾಟೀಲ ಕರದಾಳ, ಭೀಮಣ್ಣ ಸಾಲಿ, ಸೇರಿದಂತೆ ಹಲವರಿದ್ದರು.



## ಅರಕೇರಾ ಶ್ರೀ ಸಿದ್ದಯ್ಯ ಹವಲ್ದಾರ ಸರಕಾರಿ ಪದವಿ ಪೂರ್ವಕಾಲೇಜಿಗೆ ಶೇ 88.89

ಅರಕೇರಾ,ಏ.10-

2026 ನೇ ಸಾಲಿನ ಕರ್ನಾಟಕ ದ್ವಿತೀಯ ಪಿಯುಸಿ ಪರೀಕ್ಷೆ -1ರ ಫಲಿತಾಂಶ ಗುರುವಾರ ಪ್ರಕಟಗೊಂಡಿದ್ದು ಅರಕೇರಾ ಪಟ್ಟಣದಲ್ಲಿನ ಶ್ರೀ ಸಿದ್ದಯ್ಯ ಹವಲ್ದಾರ ಸರಕಾರಿ ಪದವಿ ಪೂರ್ವಕಾಲೇಜಿನಲ್ಲಿ ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳು 36 ತೇರ್ಗಡೆಯಾದ ವಿದ್ಯಾರ್ಥಿಗಳು 32 ಅನುತ್ತೀರ್ಣರಾದ ವಿದ್ಯಾರ್ಥಿಗಳು 4 ಒಟ್ಟಾರೆ ಡಿಸ್ಟಿಂಕ್ಷನ್ 8 ಪ್ರಥಮಶ್ರೇಣೆಯಲ್ಲಿ 18 ದ್ವಿತೀಯ ಶ್ರೇಣೆಯಲ್ಲಿ ಉತ್ತೀರ್ಣ 4 ತೃತೀಯ ಶ್ರೇಣೆಯಲ್ಲಿ 2ತೇರ್ಗಡೆಯಾಗಿದ್ದು ಅರಕೇರಾ ಪಟ್ಟಣದಲ್ಲಿನ ಶ್ರೀ ಸಿದ್ದಯ್ಯ ಹವಲ್ದಾರ ಸರಕಾರಿ ಪದವಿ ಪೂರ್ವಕಾಲೇಜಿಗೆ ಶೇ 88.8 ಫಲಿತಾಂಶ ಬಂದಿದೆ ಎಂದು ಪ್ರಾಚಾರ್ಯರಾದ ಬುದ್ದಿವಂತಿ ತಿಳಿಸಿದ್ದಾರೆ.

ಕಾಲೇಜಿನಲ್ಲಿ ಅತಿಹೆಚ್ಚು ಅಂಕಪಡೆದ ವಿದ್ಯಾರ್ಥಿಗಳು ಕುಮಾರಿ ಫೌಜೀಯಾ ಬೇಗಂ ತಂದೆ ಇಬ್ರಾಹಿಂಸಾಬ 600ಕ್ಕೆ 548 ಅಂಕಪಡೆದು ಶೇಕಡ 91.33 ಕಾಳೇಜಿಗೆ ಪ್ರಥಮಸ್ಥಾನ ಪಡೆದುಕೊಂಡಿದ್ದಾಳೆ. ಕುಮಾರ ಎನ್ ಶರಣುಕುಮಾರ ತಂದೆ ಜಗದೀಶನಾಗೋಲಿ 600ಕ್ಕೆ 547 ಅಂಕಪಡೆದು ಶೇಕಡ 91,96 ದ್ವಿತೀಯ ಸ್ಥಾನ ಪಡೆದೆದಿರುತ್ತಾನೆ. ಕುಮಾರಿ ಪವಿತ್ರ ತಂದೆ ಬಸವಣ್ಣಯ್ಯಸ್ವಾಮಿ ನಾಗೋಲಿ 600ಕ್ಕೆ 532 ಅಂಕಪಡೆದು ಶೇಕಡ 88.66 ತೃತಿಯ ಸ್ಥಾನ ಪಡೆದಿರುತ್ತಾಳೆ. ಕುಮಾರಿ ಬಿಸ್ಮಿಲ್ಲಾ ತಂದೆ ಸಣ್ಣಪೀರಸಾಬ 600ಕ್ಕೆ 527 ಅಂಕಪಡೆದು ಶೇಕಡಾ 87.83 ನಾಲ್ಕನೇ ಸ್ಥಾನ ಪಡೆದಿರುತ್ತಾಳೆ.

ದ್ವಿತಿಯ ಪಿಯುಸಿ 1ರ ಪರೀಕ್ಷೆಯ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ಉತ್ತಮಸಾಧನೆ ಮಾಡಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯರಾದ ಬುದ್ದಿವಂತಿ ಮೇಡಂ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಕಾಲೇಜಿಗೆ ಉತ್ತಮ ಫಲಿತಾಂಶ ಪಡೆದು ಪಟ್ಟಣಕ್ಕೆ ಮತ್ತು ಕಾಲೇಜಿಗೆ ಕೀರ್ತಿ ತಂದುಕೊಟ್ಟಿರುವ ವಿದ್ಯಾರ್ಥಿಗಳಿಗೆ ಪಟ್ಟಣದ ಮುಖಂಡರು ಮತ್ತು ಜನಪ್ರತಿನಿಧಿಗಳು ಶಿಕ್ಷಣಪ್ರೇಮಿಗಳು ಹಳೆಯ ವಿದ್ಯಾರ್ಥಿಗಳು ಕಾಲೇಜಿನ ಪ್ರಾಚಾರ್ಯರಿಗೂ ಉಪನ್ಯಾಸಕವರ್ಗದವರಿಗೂ ಹೃತ್ಪೂರ್ವಕ ಅಭಿನಂದನೆಗಳು ಸಲ್ಲಿಸಿದ್ದಾರೆ.

ಕಾಲೇಜಿಗೆ ಅತಿ ಹೆಚ್ಚು ಅಂಕಪಡೆದ ವಿದ್ಯಾಥಿಗಳು

1 ಕುಮಾರಿ ಫೌಜೀಯಾ ಬೇಗಂ ತಂದೆ ಇಬ್ರಾಹಿಂಸಾಬ ಅರಕೇರಾ

2 ಕುಮಾರ ಎನ್ ಶರಣುಕುಮಾರ ತಂದೆ ಜಗದೀಶನಾಗೋಲಿ ಅರಕೇರಾ

3) ಕುಮಾರಿ ಪವಿತ್ರ ತಂದೆ ಬಸವಣ್ಣಯ್ಯಸ್ವಾಮಿ ನಾಗೋಲಿ

## ಸರಕಾರಿ ಪದವಿ ಮಹಾವಿದ್ಯಾಲಯದಲ್ಲಿ ಆಡಳಿತಾತ್ಮಕ ಕಚೇರಿಯ ಭೂಮಿ ಪೂಜೆ. ನೆರವೇರಿಸಿದ ಶಾಸಕ ಆರ್ ವಿ. ನಾಯಕ




*ಕಲ್ಯಾಣ ಸಂಜೆ ಸುದ್ದಿ*

ಸುರಪುರ, ಏ.10-


ಪಟ್ಟಣದ ಸರಕಾರಿ ಪದವಿ ಮಹಾವಿದ್ಯಾಲಯದಲ್ಲಿ 2024.25 ನೇ ಶೈಕಣಿಕ ಸಾಲಿನ / ಅನುದಾನದ ಅಡಿಯಲ್ಲಿ ಸುಮಾರು 2 ಕೋಟಿ ರೂಪಾಯಿ ವೆಚ್ಚದ ಆಡಳಿತಾತ್ಮಕ ಕಚೇರಿಯನ್ನು ಶಾಸಕರರಾದ ಶ್ರೀ ರಾಜ್ ವೇಣುಗೋಪಾಲ್ ನಾಯಕ ಭೂಮಿ ಪೂಜೆ ನೆರವೇರಿಸಿದರು

ಈ ಕಾಲೇಜಿನ ಪ್ರಾಶುಪಾಲರು ಆದ ಬಲಭೀಮರಾಯ ದೇಸಾಯಿ ಶಾಸಕರಿಗೆ ಸನ್ಮಾನಿಸಿ

ಸುರಪುರ ಪಟ್ಟದಲ್ಲಿ ಸುಮಾರು 10 ಪದವಿ ಪೂರ್ವ ಕಾಲೇಜಿನಲ್ಲಿ ಸುಮಾರು 2000 ಮಹಿಳಾ ವಿದ್ಯಾರ್ಥಿಗಳು ಪಿಯುಸಿ ದ್ವಿತೀಯ ವರ್ಷ ಪಾಸ್ ಆಗುತ್ತಾರೆ ಶೇ /. 90 ರಷ್ಟು . ಪರಿಶಿಷ್ಟ ಜಾತಿ ಪರಿಶಿಷ್ಟ. ಪಂಗಡ.ಹಿಂದುಳಿದ ವರ್ಗದ ಮಹಿಳೆಯರು ಕಲಿಯುತ್ತಾರೆ ಇವರು ಯಾರು ಶಿಕ್ಷಣದಿಂದ ವಂಚಿತರಾಗ ಬಾರದು ಎಂದು ಸುರಪುರ ಪಟ್ಟಣಕ್ಕೆ ಮಹಿಳಾ ಪದವಿ ಕಾಲೇಜು ಮಂಜೂರಾತಿ ಮಾಡಬೇಕು ಎಂದು ಮನವಿ ಸಲ್ಲಿಸಿದರು

ಈ ಸಂದರ್ಭದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾದ ರಾಜಕುಮಾರ ನಾಯಕ್.ಮಲ್ಲಣ್ಣ ಸಾಹುಕಾರ ಮುಧೋಳ ರವಿ ಸಾಹುಕಾರ್ ಶಾಸಕರ ಆಪ್ತ ಸಹಾಯಕ ಹಣಮಂತ್ರಾಯ ಮಕಾಶಿ ಮತ್ತು ಎಲ್ಲ ಕಾಂಗ್ರೆಸ್ ಮುಖಂಡರು ಹಾಗೂ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ ಜಗದೀಶ ಕುಮಾರ ನಾಯಕ ಎಚ್. ಎಮ್ ವರ್ಗ್. ದೇವೇಂದ್ರಪ್ಪ ಪಾಟೀಲ್ ಡಾ ಮಹಾದೇವಪ್ಪ ಮೊನಯ್ಯ ಕಾಲಲ.ಪ್ರಮೋದ್ ಕುಲಕರ್ಣಿ. ಡಾ ಹಣಮಂತ್ರಾಯ ದೊಡ್ಡಮನಿ. ಶಾಂತನಾಯಕ ಬಸವರಾಜ ಬಂಡಾರಿ ಎಲ್ಲ ಭೋದಕ ಬೋದಕೇತರ್ ಸಿಬ್ಬಂದಿ ವರ್ಗ ವಿದ್ಯಾರ್ಥಿಗಳು ಉಪಸ್ಥಿತರಿದ್ದರು

## ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್‌ಗಳ ಅಳವಡಿಕೆ ಕಾಮಗಾರಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ.ಇಟ್ನಾಳ



ಕೊಪ್ಪಳ ಏ.10-

ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ. ಇಟ್ನಾಳ ಅವರು ಏಪ್ರಿಲ್ 9 ರಂದು ಪ್ರವಾಸ ಕೈಗೊಂಡು ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿದರು.

ಇದೇ ವೇಳೆ, ತುಂಗಭದ್ರಾ ಜಲಾಶಯದಲ್ಲಿ ಗೇಟ್‌ಗಳ ಫ್ಯಾಬ್ರಿಕೇಶನ್, ಬಿಚ್ಚುವಿಕೆ ಮತ್ತು ಅಳವಡಿಕೆ ಕಾಮಗಾರಿಯ ಪ್ರಸ್ತುತ ಸ್ಥಿತಿಗತಿ ಪರಿಶೀಲಿಸಿದರು.

ಜಲಾಶಯದ ಒಟ್ಟು 33 ಕ್ರಸ್ಟ್ ಗೇಟ್‌ಗಳಲ್ಲಿ 32 ಕ್ರಸ್ಟಗೇಟ್‌ಗಳ ಫ್ಯಾಬ್ರಿಕೇಶನ್ ಪೂರ್ಣಗೊಂಡಿದೆ. 1 ಗೇಟು ಫ್ಯಾಬ್ರಿಕೇಶನ್ ಹಂತದಲ್ಲಿದ್ದು, ಹೊಸಪೇಟೆ ಫ್ಯಾಬ್ರಿಕೇಶನ್ ಕೇಂದ್ರದಲ್ಲಿ ಕೆಲಸ ಪ್ರಗತಿಯಲ್ಲಿದೆ. ಗೇಟ್ ಸಂಖ್ಯೆ 1 ರಿಂದ 14 ಮತ್ತು 16 ರಿಂದ 33 ರವರೆಗಿನ ಒಟ್ಟು 32 ಗೇಟ್‌ಗಳನ್ನು ಸಂಪೂರ್ಣ ತೆರವುಗೊಳಿಸಲಾಗಿದೆ. ಗೇಟ್ ಸಂಖ್ಯೆ 15 ರ ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ. 20 ಗೇಟ್‌ಗಳ ಪ್ರಾಯೋಗಿಕ ಚಾಲನೆ ಪೂರ್ಣಗೊಂಡಿದೆ (ಗೇಟ್ ಸಂಖ್ಯೆಗಳು: 01, 02, 03, 04, 11, 12, 17, 18, 19, 20, 24, 25, 26, 27, 28, 29, 30, 31, 32 ಮತ್ತು 33). 24 ಗೇಟ್‌ಗಳ ಅಳವಡಿಕೆ ಪೂರ್ಣಗೊಂಡಿದೆ (ಗೇಟ್ ಸಂಖ್ಯೆಗಳು: 01, 02, 03, 04, 05, 06, 07, 11, 12, 17, 18, 19, 20, 21, 24, 25, 26, 27, 28, 29, 30, 31, 32 ಮತ್ತು 33). 07 ಗೇಟ್‌ಗಳ ಕೆಲಸ ಪ್ರಗತಿಯಲ್ಲಿದೆ (ಗೇಟ್ ಸಂಖ್ಯೆಗಳು: 08, 09, 10, 13, 14, 16 ಮತ್ತು 22) ಎಂದು ಅಧಿಕಾರಿಗಳು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಎಲ್.ಅರಸಿದ್ದಿ, ಕೆ.ಎನ್.ಎನ್.ಎಲ್. ಮುಖ್ಯ ಎಂಜಿನಿಯರ್ ಶ್ರೀನಿವಾಸ ಮಲ್ಲಿಗವಾಡ, ಟಿಆರ್ ವಿಭಾಗದ ಇಇ ನಾಗನಾಥ, ಎಇಇ ಧರ್ಮರಾಜ್, ಟಿಬಿ ಬೋರ್ಡ್ ಇಇ ಚಂದ್ರಶೇಖರ, ಸೆಕ್ಷನ್ ಅಧಿಕಾರಿಗಳಾದ ಜಿ. ಕಿರಣ ಮತ್ತು ಪಂಪಾಪತಿ ಡಿ.ಕೆ. ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಪಿಯುಸಿಯಲ್ಲಿ ಪ್ರತಿಶತ 86.08ರಷ್ಟು ಫಲಿತಾಂಶ ದಾಖಲು: ಡಾ.ಸುರೇಶ ಇಟ್ನಾಳ

ಕೊಪ್ಪಳ ಏ.10-

2025-26ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಫಲಿತಾಂಶ ಏಪ್ರೀಲ್ 9ರಂದು ಪ್ರಕಟವಾಗಿದ್ದು, ಕೊಪ್ಪಳ ಜಿಲ್ಲೆಯು ಪ್ರತಿಶತ 86.08 ರಷ್ಟು ಫಲಿತಾಂಶ ದಾಖಲಿಸಿದೆ ಎಂದು ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಬಿ ಇಟ್ನಾಳ ತಿಳಿಸಿದ್ದಾರೆ.

ಹಿಂದಿನ ಶೈಕ್ಷಣಿಕ ವರ್ಷದಲ್ಲಿ 23ನೇ ಸ್ಥಾನದಲ್ಲಿದ್ದ ಕೊಪ್ಪಳ ಜಿಲ್ಲೆಯು 2025-26ನೇ ಶೈಕ್ಷಣಿಕ ವರ್ಷದಲ್ಲಿ 17ನೇ ಸ್ಥಾನಕ್ಕೇರಿ ಉತ್ತಮ ಸಾಧನೆ ತೋರಿದೆ.

ಕೊಪ್ಪಳ ಸೇರಿದಂತೆ ಬೀದರ, ಕಲಬುರಗಿ, ಯಾದಗಿರಿ, ರಾಯಚೂರು, ಬಳ್ಳಾರಿ ಹಾಗೂ ವಿಜಯ ನಗರ ಜಿಲ್ಲೆಗಳ ಒಳಗೊಂಡ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕೊಪ್ಪಳಕ್ಕೆ ಮೊದಲನೇ ಸ್ಥಾನ ಲಭಿಸಿದ್ದು ಸಂತಷ ತಂದಿದೆ ಎಂದು ಅವರು ತಿಳಿಸಿದ್ದಾರೆ.

ಹೊಸದಾಗಿ ಪರೀಕ್ಷೆ ಬರೆದಿದ್ದ ಒಟ್ಟು 13,312 ವಿದ್ಯಾರ್ಥಿಗಳ ಪೈಕಿ 11,555 ವಿದ್ಯಾರ್ಥಿಗಳು ಪಾಸಾಗಿ ಶೇ.86.08ರಷ್ಟು ಫಲಿತಾಂಶ ದಾಖಲಾಗಿ, ಈ ಬಾರಿಯ ಫಲಿತಾಂಶದಲ್ಲಿ ಕೊಪ್ಪಳ ಜಿಲ್ಲೆಯು




ಉತ್ತಮ ಸ್ಥಾನ ಕಾಯ್ದುಕೊಂಡಿದೆ.

ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು, ಹೊಸಬರು ಹಾಗೂ ಖಾಸಗಿ ಮತ್ತು ರಿಪೀಟರ್ಸ್ ಸೇರಿ ಪರೀಕ್ಷೆಗೆ ಹಾಜರಾಗಿದ್ದ ಒಟ್ಟು 15,503 ಅಭ್ಯರ್ಥಿಗಳ ಪೈಕಿ 12,189 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದಾರೆ. ಪ್ರಥಮ ಬಾರಿಗೆ ಪರೀಕ್ಷೆ ಬರೆದ ಅಭ್ಯರ್ಥಿಗಳ ಪೈಕಿ ಕಲಾ ವಿಭಾಗದಲ್ಲಿ ಶೇ.78.36., ವಾಣಿಜ್ಯ ವಿಭಾಗದಲ್ಲಿ ಶೆ.90.39., ವಿಜ್ಞಾನ ವಿಭಾಗದಲ್ಲಿ ಶೇ.92.72 ರಷ್ಟು ಫಲಿತಾಂಶ ದಾಖಲಾಗಿದೆ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸೇರಿ ನಗರ ಪ್ರದೇಶದಲ್ಲಿ ಶೇ.84.64 ಹಾಗೂ ಗ್ರಾಮೀಣ ಪ್ರದೇಶದಲ್ಲಿ ಶೇ.89.99.02ರಷ್ಟು ಫಲಿತಾಂಶ ದಾಖಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

## ಅಡುಗೆ ಅನಿಲ, ಪೆಟ್ರೋಲಿಯಂ ಉತ್ಪನ್ನಗಳ ಕೊರತೆಗೆ ಕೇಂದ್ರ ಕಾರಣ: ಸಚಿವ ಪ್ರಿಯಾಂಕ್ ಖರ್ಗೆ

ಕಲಬುರಗಿ,ಏ.10-

ದೇಶದಲ್ಲಿ ಅಡುಗೆ ಅನಿಲ, ಪೆಟ್ರೋಲ್, ಡಿಸೇಲ್ ಕೊರತೆಗೆ ಕೇಂದ್ರ ಸರಕಾರವೇ ಹೊಣೆ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ದೂರಿದ್ದಾರೆ. ಕಲಬುರಗಿಯಲ್ಲಿ ತಮ್ಮನ್ನು ಭೇಟಿಯಾದ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಮಧ್ಯ ಪ್ರಾಚ್ಯ ಹಾಗೂ ಅರಬ್ ದೇಶಗಳಲ್ಲಿ ಯುದ್ದ ಪ್ರಾರಂಭವಾದಾಗ ಇಲ್ಲಿ



ಕೇಂದ್ರ ಸರಕಾರ ತಮ್ಮ ಬಳಿ ಸಾಕಷ್ಟು ಇಂಧನ ಲಭ್ಯವಿದೆ ಎಂದು ಹೇಳಿತ್ತು. ಹಾಗಾದರೆ ಅಗತ್ಯ ವಸ್ತು ಕಾಯ್ದೆ ಜಾರಿ ಮಾಡಿದ್ದು ಯಾಕೆ? ಸ್ವತಃ ಮೋದಿಯವರೇ, ಕೊರೋನ ಸಮಯದಲ್ಲಿ ಎಲ್ಲರೂ ಒಗ್ಗೂಡಿ ಎದುರಿಸಿದಂತೆ ಈಗಲೂ ಯುದ್ದದ ಸಮಸದಲ್ಲಿ ಎದರಿಸಬೇಕು ಎಂದು ಜನರಿಗೆ ಕರೆ ನೀಡಿದ್ದು ಯಾಕೆ? ಮೋದಿ ಸರಕಾರದ ಆರ್ಥಿಕ ಹಾಗೂ ವಿದೇಶಾಂಗ ನೀತಿಗಳು ದೇಶದ ಜನರಿಗೆ ಕಷ್ಟ ತಂದೊಡ್ಡಿವೆ ಎಂದರು.

ವಿಶ್ವಗುರು ಎಂದು ಸ್ವಯಂ ಬೆನ್ನು ತಟ್ಟಿಕೊಳ್ಳುವ ಮೋದಿ, ಯುದ್ದ ನಿಲ್ಲಿಸುವ ಪ್ರಯತ್ನ ಯಾಕೆ ಮಾಡಲಿಲ್ಲ. ಹಿಂದೆ ವಿಯಟ್ನಾಂ ಯುದ್ದ ನಡೆದಾಗ, ಅಂದಿನ ಪ್ರಧಾನಿ ನೆಹರೂ ಮಧ್ಯಸ್ಥಿಕೆ ವಹಿಸಿದ್ದರು. ಇಸ್ರೇಲ್ ಗೆ ಹೋಗಿ ನೇತನ್ಯಾಹು ಅವರನ್ನು ತಬ್ಬಿಕೊಂಡು ಬಂದ ಮೋದಿ ಈಗ ಯಾಕೆ ಯುದ್ದ ನಿಲ್ಲಿಸುವ ಪ್ರಯತ್ನ ಮಾಡಿಲ್ಲ. ಅತ್ತ ಇರಾನ್ ಹಾಗೂ ಅಮೆರಿಕ ನಡುವೆ ಪಾಕಿಸ್ತಾನ ಮಾತುಕತೆ ನಡೆಸಿದೆ.

ಕಲಬುರಗಿ ಜಿಲ್ಲೆಯಿಂದ ಅಕ್ರಮವಾಗಿ ಅಕ್ಕಿ ಮಹಾರಾಷ್ಟ್ರಕ್ಕೆ ಸಾಗಾಟವಾಗುತ್ತಿದೆ. ಹಿರಿಯ ಅಧಿಕಾರಿಗಳು ಶಾಮೀಲಾಗಿರುವ ಆರೋಪದ ಬಗ್ಗೆ ಕೇಳಿದಾಗ ಉತ್ತರಿಸಿದ ಸಚಿವರು, ಕಲಬುರಗಿ ಹಾಗೂ ಯಾದಗಿರಿಯ ಪ್ರಕರಣಗಳನ್ನು ಸಂಬಂಧಿಸಿದ ಸಚಿವರ ಗಮನಕ್ಕೆ ತರಲಾಗಿದೆ. ಉಪಚುನಾವಣೆಯ ನೀತಿ ಸಂಹಿತೆ ಮುಗಿದ ನಂತರ ಆ ಬಗ್ಗೆ ಕ್ರಮ ವಹಿಸಲಾಗುವುದು ಎಂದರು.

ನಿಮ್ಮೂರು ಸುದ್ದಿ

## ಸಂಪಾದಕೀಯ

# ಮತ್ತೊಮ್ಮೆ ಮಹಾ ದೋಖಾ: ಜಾಹೀರಾತಿಗೇ ಸೀಮಿತವಾದ ವಿಬಿಜಿ ರಾಮ್ ಜಿ, ಹತಾಶೆಯತ್ತ ಗ್ರಾಮೀಣ ಕೂಲಿಕಾರರು

ಯಾವುದೇ ಯೋಜನೆ ಜನಪರವಾಗಬೇಕಾದರೆ ಅದು ಜನರ ಬದುಕಿನಲ್ಲಿ ಧನಾತ್ಮಕ ಬದಲಾವಣೆ ತರಬೇಕು. ಆದರೆ ಕೇಂದ್ರದ ಬಹುತೇಕ ಯೋಜನೆಗಳು 'ಜನಪರ' ಆಗುವುದಕ್ಕಿಂತ ಹೆಚ್ಚಾಗಿ 'ಜಾಹೀರಾತು ಪರ' ಆಗಿವೆ. ಜಾಹೀರಾತಿಗೆ ಖರ್ಚು ಮಾಡಿದ ಹಣದಲ್ಲಿ ಕನಿಷ್ಠ ಅರ್ಧದಷ್ಟನ್ನಾದರೂ ಸಬ್ಸಿಡಿಗೆ ನೀಡಿದ್ದರೆ ಬಡವರಿಗೆ ಅನುಕೂಲವಾಗುತ್ತಿತ್ತು.

ನವ ಭಾರತದಲ್ಲಿ ಆಡಳಿತವೆಂದರೆ ಜನಪರ ಕೆಲಸ ಮಾಡುವುದಲ್ಲ; ತಾವು ಮಾಡದ ಕೆಲಸವನ್ನೂ ಮಾಡಿದ್ದೇವೆ ಎಂದು ನಂಬಿಸುವ ಭ್ರಮೆ ಸೃಷ್ಟಿಸುವುದು ಎನ್ನುವಂತಾಗಿದೆ. ಮೋದಿ ಸರ್ಕಾರ ಈ ಜಾಹೀರಾತು ರಾಜಕಾರಣದಲ್ಲಿ ಪಿಎಚ್.ಡಿ ಮಾಡಿದಂತಿದೆ. ಅದರ ಇತ್ತೀಚಿನ ಬಲಿಪಶು ಗ್ರಾಮೀಣ ಭಾರತದ ಜೀವನಾಡಿ ಮನರೇಗಾ. ದಶಕಗಳ ಕಾಲ ದೇಶದ ಹಳ್ಳಿಗಳ ಹಸಿವು ನೀಗಿಸಿ, ಬಡವರ ಪಾಲಿನ ಕಲ್ಪವೃಕ್ಷವಾಗಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ () ಇಂದು ಕೇಂದ್ರ ಸರ್ಕಾರದ ವ್ಯವಸ್ಥಿತ ನಿರ್ಲಕ್ಷ್ಯಕ್ಕೆ ಬಲಿಯಾಗುತ್ತಿದೆ. ತಳಮಟ್ಟದಲ್ಲಿ ಉದ್ಯೋಗ ಭರವಸೆ ನೀಡಿದ್ದ ಈ ಯೋಜನೆಯನ್ನು ವ್ಯವಸ್ಥಿತವಾಗಿ ನಾಶ ಮಾಡಿ, ಅದರ ಜಾಗದಲ್ಲಿ ವಿಕಸಿತ್ ಭಾರತ ಗ್ಯಾರಂಟಿ ಫಾರ್ ರೋಜ್‌ಗಾರ್ ಆಂಡ್ ಅಜೀವಿಕ ಮಿಷನ್ (- ) ಹೆಸರಿನ ಕೇಂದ್ರದ ಪ್ರಾಡಕ್ಟ್‌ನ್ನು ಮಾರುಕಟ್ಟೆಗೆ ಇಳಿಸಲಾಗಿದೆ. ಇನ್ನೂ ಅನುಮೋದನೆಯನ್ನೇ ಪಡೆಯದ ಈ ಯೋಜನೆಯ ಪ್ರಚಾರಕ್ಕಾಗಿ ಕೋಟಿ ಕೋಟಿ ಹಣ ವ್ಯಯಿಸಲಾಗುತ್ತಿದೆ. ಇದು ಕೇಂದ್ರ ಸರ್ಕಾರ ಶ್ರಮಿಕ ವರ್ಗಕ್ಕೆ ಮಾಡುತ್ತಿರುವ ಮಹಾ ದೋಖಾ.




ಜಾಹೀರಾತುಗಳು ಸಾಮಾನ್ಯ ಜನರ ಮನಃಸ್ಥಿತಿಯ ಮೇಲೆ ಯಾವ ರೀತಿಯ ಗಾಢ ಪ್ರಭಾವ ಬೀರಬಲ್ಲವು ಎಂಬುದನ್ನು ಕೇಂದ್ರ ಸರ್ಕಾರ ಚೆನ್ನಾಗೇ ಅರಿತುಕೊಂಡಿದೆ. ಕೋಟಿ ಕೋಟಿ ಹಣ ಸುರಿದು ಅತಿರಂಜಿತ ಜಾಹೀರಾತುಗಳನ್ನು ಸೃಷ್ಟಿಸಿದರೆ ಜನರ ಕಣ್ಣಿಗೆ ಮಣ್ಣೆರಚಬಹುದು ಎಂಬುದು ಸರ್ಕಾರದ ಲೆಕ್ಕಾಚಾರವಾಗಿರಬಹುದು. ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಅಧಿಕೃತ ದತ್ತಾಂಶಗಳ ಪ್ರಕಾರ, ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರ ಕೇವಲ ಜಾಹೀರಾತು ಮತ್ತು ಪ್ರಚಾರಕ್ಕಾಗಿ ಸುಮಾರು 6,500 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಹಣ ವ್ಯಯಿಸಿದೆ. ಅಂದರೆ, ದಿನವೊಂದಕ್ಕೆ ಸರಾಸರಿ 1.5 ರಿಂದ 2 ಕೋಟಿ ರೂಪಾಯಿಗಳನ್ನು ಕೇವಲ ತನ್ನ ವ್ಯಕ್ತಿ ಕೇಂದ್ರಿತ ಪ್ರಚಾರಕ್ಕಾಗಿ ಸುರಿಯುತ್ತಿದೆ. ಬಡ ಕಾರ್ಮಿಕರು ಪೋಸ್ಟರ್‌ಗಳನ್ನು ನೋಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳುವಂತಾಗಿದೆ. ಜನ ಈ ಜಾಹೀರಾತುಗಳನ್ನೇ ನಂಬಿ ಮತ ಚಲಾಯಿಸುತ್ತಾರೆ ಎಂಬ ಅಚಲ ನಂಬಿಕೆಯಿಂದಲೇ ಇಂತಹ ಇಮೇಜ್ ಬಿಲ್ಡಿಂಗ್ ತಂತ್ರಗಳಿಗೆ ತೆರಿಗೆದಾರರ ಸಾವಿರಾರು ಕೋಟಿ ಹಣವನ್ನು ವ್ಯರ್ಥ ಮಾಡಲಾಗುತ್ತಿದೆ.

ಯಾವ ಯೋಜನೆಯ ಹಿರಿಮೆ ಸಾರಲು ಸರ್ಕಾರ ದೇಶಾದ್ಯಂತ ಜಾಹೀರಾತುಗಳ ಮಳೆ ಸುರಿಸುತ್ತಿದೆಯೋ, ಆ ಯೋಜನೆಗೆ ಇಂದಿನವರೆಗೂ ಅಧಿಕೃತ ಬಜೆಟ್ ಅನುಮೋದನೆಯೇ ದೊರೆತಿಲ್ಲ. ಈಗಾಗಲೇ ಹೊಸ ಹಣಕಾಸು ವರ್ಷ 2026-27 ಚಾಲ್ತಿಯಲ್ಲಿದ್ದರೂ, ಕರ್ನಾಟಕ ಸೇರಿದಂತೆ ದೇಶದ ಹಲವು ರಾಜ್ಯಗಳ ಲೇಬರ್ ಬಜೆಟ್‌ಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿಲ್ಲ. ಹೀಗಾಗಿ, ಕೆಲಸಕ್ಕಾಗಿ ಗ್ರಾಮ ಪಂಚಾಯತ್ ಮೆಟ್ಟಿಲೇರುವ ಕಾರ್ಮಿಕರಿಗೆ ಹೊಸ ಕೆಲಸ ನೀಡಲು ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ. ಅಂಕಿಅಂಶಗಳ ಪ್ರಕಾರ ಕರ್ನಾಟಕದ ಸುಮಾರು 5,958 ಗ್ರಾಮ ಪಂಚಾಯತ್‌ಗಳ ಪೈಕಿ ಶೇ.81ರಷ್ಟು ಪಂಚಾಯತ್‌ಗಳಲ್ಲಿ ಅಂದರೆ 4,869 ಪಂಚಾಯತ್‌ಗಳಲ್ಲಿ ಈ ವರ್ಷ ಶೂನ್ಯ ವೆಚ್ಚ ದಾಖಲಾಗಿದೆ. ಇದು ಸಾವಿರಾರು ಹಳ್ಳಿಗಳಲ್ಲಿ ಉದ್ಯೋಗವಿಲ್ಲದೆ ಜನರು ಹತಾಶರಾಗಿ ಕುಳಿತಿರುವುದನ್ನು ತೋರಿಸುತ್ತದೆ. ಪ್ರಚಾರಕ್ಕಾಗಿ ಹಣದ ಹೊಳೆ ಹರಿಸುವ ಸರ್ಕಾರಕ್ಕೆ, ಗ್ರಾಮೀಣ ಶ್ರಮಿಕ ವರ್ಗಕ್ಕೆ ಕೂಲಿ ನೀಡಲು ಮಾತ್ರ ಹಣದ ಕೊರತೆ ಎದುರಾಗುತ್ತಿದೆ.

ಜಾಹೀರಾತು ಮೋಸದ ಜಾಲ ನರೇಗಾಕ್ಕೆ ಸೀಮಿತವಾಗಿಲ್ಲ. ಈ ಹಿಂದೆ ಬೇಟಿ ಬಚಾವೋ ಬೇಟಿ ಪಢಾವೋ ಯೋಜನೆಗಾಗಿ ಬಿಡುಗಡೆಯಾದ ಹಣದ ಪೈಕಿ ಸುಮಾರು ಶೇ. 80ರಷ್ಟು ಹಣ ಕೇವಲ ಜಾಹೀರಾತು ಮತ್ತು ಪ್ರಚಾರಕ್ಕೆ ಬಳಕೆಯಾಗಿದೆ ಎಂದು ಸಂಸತ್ತಿನ ಸಮಿತಿಯ ವರದಿಯೇ ಬೊಟ್ಟು ಮಾಡಿದೆ! ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಆರೋಗ್ಯಕ್ಕೆ ಬಳಕೆಯಾಗಬೇಕಿದ್ದ ಹಣ ಪ್ರಧಾನಿಯವರ ಫೋಟೋ ಇರುವ ಫ್ಲೆಕ್ಸ್ ಮತ್ತು ಪತ್ರಿಕಾ ಜಾಹೀರಾತುಗಳ ಪಾಲಾಗಿದೆ. ಇದು ಯೋಜನೆಯ ಉದ್ದೇಶವನ್ನೇ ಬುಡಮೇಲು ಮಾಡಿದ ಮಹಾ ವಂಚನೆ. ಹಾಗೆಯೇ, ಉಜ್ವಲ ಯೋಜನೆಯಡಿಯಲ್ಲಿ ಉಚಿತ ಗ್ಯಾಸ್ ನೀಡುತ್ತೇವೆಂದು ಕೋಟಿಗಟ್ಟಲೆ ಜಾಹೀರಾತು ನೀಡಲಾಯಿತು. ಇಂದು ಗ್ಯಾಸ್ ಸಿಲಿಂಡರ್ ಬೆಲೆ ಗಗನಕ್ಕೇರಿದ್ದು, ಬಡ ಮಹಿಳೆಯರು ಮತ್ತೆ ಕೊಳವೆ ಹಿಡಿದು ಒಲೆ ಊದುತ್ತಿದ್ದಾರೆ. ಜಾಹೀರಾತಿಗೆ ಖರ್ಚು ಮಾಡಿದ ಹಣದಲ್ಲಿ ಕನಿಷ್ಠ ಅರ್ಧದಷ್ಟನ್ನು ಸಬ್ಸಿಡಿಗೆ ನೀಡಿದ್ದರೆ ಬಡವರಿಗೆ ಅನುಕೂಲವಾಗುತ್ತಿತ್ತು. ಜಾಹೀರಾತುಗಳಲ್ಲಿ ಮುಗುಳ್ನಗುವ ಮಹಿಳೆಯರಿಗೂ, ವಾಸ್ತವದಲ್ಲಿ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಮಹಿಳೆಯರಿಗೂ ಯಾವುದೇ ಸಂಬಂಧವಿಲ್ಲ.

ಟಿವಿ, ಸಿನಿಮಾ ಮಂದಿರ ಹಾಗೂ ರೇಡಿಯೋಗಳಲ್ಲಿ ಸ್ವಚ್ಛ ಭಾರತ್ ಅಭಿಯಾನ ( ) ಯೋಜನೆಯ ಜಾಹೀರಾತುಗಳು ಅತಿ ಹೆಚ್ಚು ಪ್ರಸಾರವಾದವು. ಇದಕ್ಕಾಗಿ ಸೆಲೆಬ್ರಿಟಿಗಳನ್ನು ಬಳಸಿ ಕೋಟ್ಯಂತರ ರೂಪಾಯಿ ಖರ್ಚು ಮಾಡಲಾಯಿತು. ಆದರೆ, ಗ್ರಾಮೀಣ ಭಾಗದಲ್ಲಿ ಕಟ್ಟಲಾದ ಲಕ್ಷಾಂತರ ಶೌಚಾಲಯಗಳಿಗೆ ನೀರಿನ ಸಂಪರ್ಕವೇ ಇಲ್ಲ. ಜಾಹೀರಾತುಗಳಲ್ಲಿ ದೇಶ ಬಯಲು ಶೌಚ ಮುಕ್ತ ಎಂದು ಘೋಷಿಸಲಾಯಿತಾದರೂ, ಆ ಶೌಚಾಲಯಗಳು ಇಂದು ಕಸದ ತೊಟ್ಟಿಗಳಾಗಿವೆ.

ನಗರಗಳನ್ನು ವಿದೇಶಿ ನಗರಗಳಂತೆ ಮಾಡುವುದಾಗಿ ಸ್ಮಾರ್ಟ್‌ಸಿಟಿ ಮಿಷನ್‌ನಡಿ ಭರ್ಜರಿ ಗ್ರಾಫಿಕ್ಸ್ ಜಾಹೀರಾತುಗಳನ್ನು ನೀಡಲಾಯಿತು. ಆದರೆ ಸ್ಮಾರ್ಟ್ ಸಿಟಿ ಪಟ್ಟಿಯಲ್ಲಿರುವ ನಗರಗಳು ಮಳೆಯಾದಾಗ ಮುಳುಗಿ, ಬೇಸಿಗೆಯಲ್ಲಿ ಧೂಳೆಬ್ಬಿಸುತ್ತಿವೆ. ರಸ್ತೆಗಳು ಗುಂಡಿಮಯವಾಗಿವೆ. ಜಾಹೀರಾತಿನಲ್ಲಿ ತೋರಿಸಿದ ಹೈಟೆಕ್ ನಗರಗಳು ಕಂಪ್ಯೂಟರ್ ಸ್ಕ್ರೀನ್ ಬಿಟ್ಟು ಹೊರಗಿಳಿಯುತ್ತಲೇ ಇಲ್ಲ.

ಹಾವೇರಿ ಜಿಲ್ಲೆಯ ನರೇಗಾ ಕೂಲಿಕಾರ್ಮಿಕರ ಸಂಘಟನೆಯ ಮುಖಂಡರೊಬ್ಬರು ಸರ್ಕಾರದ ಧೋರಣೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾ, ''ಹಾವೇರಿಯ ಕೇವಲ ಐದು ಬ್ಲಾಕ್‌ಗಳಲ್ಲಿಯೇ 15,000ಕ್ಕೂ ಹೆಚ್ಚು ನರೇಗಾ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಅರ್ಧಕ್ಕರ್ಧ ಮಹಿಳೆಯರೇ ಇದ್ದಾರೆ. ಸದ್ಯ ನರೇಗಾ ಹೆಸರನ್ನು ಬದಲಿಸಿ ವಿಬಿಜಿ ರಾಮ್ ಜಿ ಎಂಬ ಹೊಸ ಯೋಜನೆ ತರುವ ಸರ್ಕಾರದ ಕಸರತ್ತಿನ ನಡುವೆ ಬಡವರ ಬದುಕು ಮೂರಾಬಟ್ಟೆಯಾಗಿದೆ. ಈ ಬಗ್ಗೆ ಗ್ರಾಪಂ ಅಧಿಕಾರಿಗಳಾಗಲೀ ಅಥವಾ ಜಿಪಂ ಸಿಇಒ ಆಗಲೀ ಯಾರೊಬ್ಬರೂ ಸರಿಯಾಗಿ ಸ್ಪಂದಿಸುತ್ತಿಲ್ಲ. ಬಡವರ ಹೊಟ್ಟೆಪಾಡಿನ ಬಗ್ಗೆ ಯಾರಿಗೂ ಕಾಳಜಿ ಇಲ್ಲದಂತಾಗಿದೆ. ದಿನಕ್ಕೆ ಸಿಗುವ 370 ರೂಪಾಯಿ ಕೂಲಿಯಲ್ಲಿಯೇ ಜೀವನ ಸಾಗಿಸಬೇಕಾದ ಕಾರ್ಮಿಕರಿಗೆ ಈಗ ಎರಡೆರಡು ವಾರಗಳ ವೇತನ ಬಾಕಿ ಇದೆ. ಒಂದು ಕಡೆ ಹಳೆಯ ಬಾಕಿ ಹಣವೂ ಬಂದಿಲ್ಲ, ಇನ್ನೊಂದು ಕಡೆ ಹೊಸದಾಗಿ ಕೆಲಸವೂ ಸಿಗುತ್ತಿಲ್ಲ. ಹೀಗಾದರೆ ಬಡವರು ಬದುಕುವುದು ಹೇಗೆ? ಹೊಸ ಯೋಜನೆ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರುವವರೆಗಾದರೂ ಹಳೆಯ ಯೋಜನೆಯಲ್ಲೇ ಕೆಲಸ ಕೊಡಬಹುದಿತ್ತು. ಆದರೆ ಸರ್ಕಾರ ಈಗ ಅತ್ತ ಹಳೆಯದೂ ಇಲ್ಲ, ಇತ್ತ ಹೊಸದೂ ಇಲ್ಲ ಎನ್ನುವಂತಹ ಪರಿಸ್ಥಿತಿ ನಿರ್ಮಿಸಿ ಕಾರ್ಮಿಕರನ್ನು ಹತಾಶೆಗೆ ತಳ್ಳಿದೆ'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಯಾವುದೇ ಯೋಜನೆ ಜನಪರವಾಗಬೇಕಾದರೆ ಅದು ಜನರ ಬದುಕಿನಲ್ಲಿ ಧನಾತ್ಮಕ ಬದಲಾವಣೆ ತರಬೇಕು. ಆದರೆ ಕೇಂದ್ರದ ಬಹುತೇಕ ಯೋಜನೆಗಳು ಜನಪರ ಆಗುವುದಕ್ಕಿಂತ ಹೆಚ್ಚಾಗಿ ಜಾಹೀರಾತು ಪರ ಆಗಿವೆ. ಯೋಜನೆಯ ಯಶಸ್ಸಿಗಿಂತ ಹೆಚ್ಚಾಗಿ ಪ್ರಧಾನಿಯವರ ಇಮೇಜ್ ಬೆಳೆಸಲು ಈ ಹಣ ಬಳಕೆಯಾಗುತ್ತಿದೆ. ನರೇಗಾದಂತಹ ನೇರ ನಗದು ವರ್ಗಾವಣೆ ಮತ್ತು ಕೆಲಸ ನೀಡುವ ಯೋಜನೆಗಳನ್ನು ನಾಶ ಮಾಡಿ, ಖಾಸಗಿ ಕಂಪನಿಗಳಿಗೆ ಲಾಭ ಮಾಡಿಕೊಡುವ ಯೋಜನೆಗಳಿಗೆ ಜಾಹೀರಾತಿನ ಬಣ್ಣ ಹಚ್ಚಲಾಗುತ್ತಿದೆ.

''ರಾಜ್ಯ ಸರ್ಕಾರವು ಕಾಲಕಾಲಕ್ಕೆ ಎಲ್ಲಾ ಅಂದಾಜು ಪಟ್ಟಿಗಳನ್ನು ಸಲ್ಲಿಸಿದ್ದರೂ ಕೇಂದ್ರ ಸರ್ಕಾರ ಲೇಬರ್ ಬಜೆಟ್ ಅನುಮೋದನೆಯನ್ನು ತಡೆಹಿಡಿದಿದೆ. ಹೊಸ ವ್ಯವಸ್ಥೆ ಸಿದ್ಧವಾಗದಿದ್ದರೂ ಹಳೆಯದನ್ನು ಸ್ಥಗಿತಗೊಳಿಸಿರುವುದು ಮತ್ತು ಜಾಹೀರಾತುಗಳ ಮೂಲಕ ಬಣ್ಣದ ಸುಳ್ಳುಗಳನ್ನು ಹೇಳುತ್ತಿರುವುದು ಗ್ರಾಮೀಣ ಭಾರತಕ್ಕೆ ಮಾಡುತ್ತಿರುವ ದೊಡ್ಡ ಅವಮಾನ. ಇದು ಕೇವಲ ಆಡಳಿತಾತ್ಮಕ ವೈಫಲ್ಯವಲ್ಲ, ಬದಲಿಗೆ ಬಡವರಿಂದ ಶ್ರೀಮಂತರ ಕಡೆಗೆ ಸಂಪತ್ತನ್ನು ವರ್ಗಾಯಿಸುವ ಮತ್ತು ಜನರ ಗಮನವನ್ನು ಮೂಲಭೂತ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯುವ ಜಾಹೀರಾತು ಮಾದರಿಯ ಸರ್ವಾಧಿಕಾರ'' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ತಿಳಿಸಿರುವುದಾಗಿ ದ ಹಿಂದೂ ವರದಿ ಮಾಡಿದೆ.

ಯಾವುದೇ ಸರ್ಕಾರದ ಯಾವುದೇ ಯೋಜನೆಗಳು ಬಡವನ ಹೊಟ್ಟೆ ತುಂಬಿಸುತ್ತಿದ್ದರೆ, ಅವುಗಳಿಗೆ ಕೋಟಿ ಹಣ ಸುರಿದು, ಸೆಲೆಬ್ರಿಟಿಗಳ ಕರೆತಂದು, ಜಾಹೀರಾತು ನೀಡಿ ಪ್ರಚಾರ ಮಾಡುವ ಅಗತ್ಯವೇ ಇಲ್ಲ. ಅವು ಜನಪರವಾಗಿದ್ದರೆ, ತಾವಾಗಿಯೇ ಪ್ರಚಾರವಾಗುತ್ತವೆ, ಸರ್ಕಾರದ ಅಧಿಕಾರದ ಕುರ್ಚಿಗೆ ಕಾಲುಗಳಾಗುತ್ತವೆ. ಆದರೆ, ಇತ್ತೀಚಿನ ಕೆಲ ವರ್ಷಗಳಿಂದ ಪರಿಸ್ಥಿತಿ ಹೀಗಿಲ್ಲ. ಈಗಿನ ಪ್ರತಿ ಜಾಹೀರಾತುಗಳ ಮೇಲಿನ ಒಂದೊಂದು ರೂಪಾಯಿಯೂ ಹಸಿದವನ ಬಾಯಿಯಿಂದ ಕಸಿದುಕೊಂಡ ತುತ್ತಿನಂತಿದೆ. ಈ ''ಜಾಹೀರಾತು ರಾಜಕಾರಣ''ದ ವಿರುದ್ಧ ಜನರು ಎಚ್ಚೆತ್ತುಕೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ಇದಕ್ಕಿಂತಲೂ ಹೀನಾಯ ದಿನಗಳನ್ನು ಎದುರಿಸಬೇಕಾದ ಪರಿಸ್ಥಿತಿ ಎದುರಾಗಲಿದೆ.

ಸವಕಲಾದ ಭರವಸೆಗಳಿಗಿಂತ ಸಬಲವಾದ ಕೆಲಸದ ಅಗತ್ಯವಿರುವ ಈ ಹೊತ್ತಿನಲ್ಲಿ, ಸರ್ಕಾರವು ತನ್ನ ಪ್ರಚಾರದ ಗೀಳು ಬಿಟ್ಟು ಜನರ ಬದುಕಿನ ಕಡೆಗೆ ಗಮನಹರಿಸಬೇಕಿದೆ. ಹಸಿವಿನ ಸಂಕಟ ಎಂಥದ್ದು ಎಂಬ ಕನಿಷ್ಠ ಜ್ಞಾನ ಈ ಆಡಳಿತಾರೂಢರಿಗೆ ಅರ್ಥವಾಗಬೇಕಿದೆ. ಅಲ್ಲಿಯವರೆಗೆ, ವಿಕಸಿತ ಭಾರತ ಎನ್ನುವುದು ಬಡವರ ಪಾಲಿಗೆ ದುಬಾರಿ ಮತ್ತು ಮೋಸದ ಜಾಹೀರಾತು ಆಗಿಯೇ ಉಳಿಯಲಿದೆ.

# ಜಲದೊಳಗಣ ಕಿಚ್ಚು ಜಲವ ಸುಡಲಿಲ್ಲ- ದಲಿತ ಚಳವಳಿಯ ಮೌಲ್ಯ ಪ್ರಜ್ಞೆಯ ಹುಡುಕಾಟ

ಎಡಗೈ ಬಲಗೈ ಸಂಘಟನೆಗಳು ಒಗ್ಗಟ್ಟಾಗಿ ಖಾಸಗಿವಲಯ, ಸಹಕಾರಿ ವಲಯ ಹಾಗೂ ಹೊರಗುತ್ತಿಗೆಯಲ್ಲಿ ಮೀಸಲಾತಿ ಪ್ರಮಾಣವನ್ನು ಕೇಳಬೇಕಿದೆ. ನಾಳೆ ದಿವಸ ಹೊರಗುತ್ತಿಗೆಯ ಕೆಲಸಗಳು ಸರ್ಕಾರಿ ವ್ಯವಸ್ಥೆಯಲ್ಲಿ ಪರ್ಮನೆಂಟ್ ಆದರೆ, ಬೇಕು ಬೇಕಾದವರನ್ನು ಸೇರಿಸಿದ ರಾಜಕೀಯ ವ್ಯವಸ್ಥೆಗೆ ಮೀಸಲಾತಿಯ ಹಕ್ಕನ್ನೆ ನಿರಾಕರಿಸಿದಂತಾಗುತ್ತದೆ.

ಇಂದು ಒಳಮೀಸಲಾತಿಯ ವಿಚಾರ ಸಾಕಷ್ಟು ವಿವಾದದ ಕೇಂದ್ರ ಬಿಂದುವಾಗಿದೆ. ಇದಕ್ಕೆ ಮುಖ್ಯಕಾರಣ ತಮಿಳಿನಾಡಿನಂತೆ ನಾವು ಮೀಸಲಾತಿಯ ಪ್ರಮಾಣ ಹೆಚ್ಚಿಸಿ ಕೇಂದ್ರ ಸರ್ಕಾರದ ಮೂಲಕ ಒಂಭತ್ತನೆಯ ಶೆಡ್ಯೂಲ್ ಗೆ ಸೇರಿಸಲಾಗದ ನಮ್ಮ ರಾಜಕೀಯ ಇಚ್ಛಾಶಕ್ತಿಯ ಕೊರತೆಯೇ ಆಗಿದೆ.

ನಮ್ಮಲ್ಲಿ ಮೀಸಲಾತಿ ಹೆಚ್ಚಿಸಿದವರಲ್ಲಿ ಅಗ್ರಗಣ್ಯರೆಂದರೆ ವೀರಪ್ಪ ಮೊಯ್ಲಿಯವರು ಆದರೆ ಅದನ್ನು ಕೋರ್ಟನಲ್ಲಿ ಪ್ರಶ್ನಿಸಲಾರದಂತೆ ಒಂಭತ್ತನೆಯ ಶೆಡ್ಯೂಲ್‌ಗೆ ಸೇರಿಸುವಷ್ಟರಲ್ಲಿ ಅವರು ಸ್ಥಾನದಿಂದ ಕೆಳಗೆ ಇಳಿದುಬಿಟ್ಟದ್ದರು. ದೇವೇಗೌಡರು ಪ್ರಧಾನಿಯಾಗಿದ್ದರು. ತಮ್ಮ ಕೆಲವು ಉತ್ತಮ ಕೆಲಸದೊಂದಿಗೆ ಮೀಸಲಾತಿಯ ಪ್ರಮಾಣ ಹೆಚ್ಚಿಸಿ ಒಂಭತ್ತನೆಯ ಶೆಡ್ಯೂಲ್‌ಗೆ ಸೇರಿಸಿದ್ದರೆ, ಇಂದು ದಲಿತರ ಕಣ್ಮಣಿಯಾಗಿ ಬಿಡುತ್ತಿದ್ದರು. ಅರಸು ಅವರ ಹಾಗೆ ಅವರ ಹೆಸರು ಚಾಲ್ತಿಯಲ್ಲಿರೋದು. ಈಗಲೂ ಅವರಿಗೆ ಆ ಅವಕಾಶವಿದೆ. ಸಿದ್ದರಾಮಯ್ಯನವರು ಸರ್ವಪಕ್ಷಗಳ ಸಭೆ ಕರೆದು ಕೇಂದ್ರವನ್ನು ಒತ್ತಾಯಿಸಲೇಬೇಕಾದ ಕಾಲ ಬಂದಿದೆ. ದಲಿತರ ಜನಸಂಖ್ಯೆಕ್ಕಿಂತಲೂ ಮೀಸಲಾತಿ ಪ್ರಮಾಣ ಕಡಿಮೆ ಇದೆ. ಇವತ್ತು ಮೀಸಲಾತಿ ಐವತ್ತು ಮೀರಲಾರದಂತೆ ಸುಪ್ರೀಂಕೋರ್ಟ್ ವಿಧಿಸಿರುವ ನಿಬಂಧನೆಯನ್ನು ಸಡಿಲಿಸುವ ಕಾಲ ಬಂದಿದೆ.

ಅಲ್ಲದೆ, ಸರ್ಕಾರಿ ವ್ಯವಸ್ಥೆಯಲ್ಲಿ ಮೀಸಲಾತಿ ಪ್ರಮಾಣವೇ ಒಂದರಿಂದ ಎರಡು ಪರ್ಸೆಂಟ್‌ಗೆ ಬಂದಿದೆ. ಅಗಾಧವಾಗಿ ಮೀಸಲಾತಿಯನ್ನು ವಿಸ್ತರಿಸಬೇಕಾದ ಪ್ರಮಾಣ ಖಾಸಗಿವಲಯ ಇರಬಹುದು, ಸಹಕಾರಿ ವಲಯ ಇರಬಹುದು, ಹೊರಗುತ್ತಿಗೆಯಲ್ಲಿ ಇರಬಹುದು ಮೀಸಲಾತಿಯನ್ನು ವಿಸ್ತರಿಸಬೇಕೆಂದು ಹೋರಾಟವೇ ಆಗುತ್ತಿಲ್ಲ. ಎಡಗೈ ಬಲಗೈ ಸಂಘಟನೆಗಳು ಒಗ್ಗಟ್ಟಾಗಿ ಖಾಸಗಿವಲಯ, ಸಹಕಾರಿ ವಲಯ ಹಾಗೂ ಹೊರಗುತ್ತಿಗೆಯಲ್ಲಿ ಮೀಸಲಾತಿ ಪ್ರಮಾಣವನ್ನು ಕೇಳಬೇಕಿದೆ. ನಾಳೆ ದಿವಸ ಹೊರಗುತ್ತಿಗೆಯ ಕೆಲಸಗಳು ಸರ್ಕಾರಿ ವ್ಯವಸ್ಥೆಯಲ್ಲಿ ಪರ್ಮನೆಂಟ್ ಆದರೆ ಬೇಕು ಬೇಕಾದವರನ್ನು ಸೇರಿಸಿದ ರಾಜಕೀಯ ವ್ಯವಸ್ಥೆಗೆ ಮೀಸಲಾತಿಯ ಹಕ್ಕನ್ನೆ ನಿರಾಕರಿಸಿದಂತಾಗುತ್ತದೆ.

ಹಾಗಾಗಿ ಈ ಒಂದೆರಡು ಪರ್ಸೆಂಟ್ ಮೀಸಲಾತಿಗಾಗಿ ಸಮುದಾಯದ ನಡುವೆ ಒಡಕು ಉಂಟು ಮಾಡಲು ಹೆಣಗಾಡುತ್ತಿರುವ ಬಿಜೆಪಿಯಂಥ ಪಕ್ಷಕ್ಕೆ ಸಮೃದ್ದವಾಗಿ ಕಬಳಿಸಿರುವ ಖಾಸಗಿ ರಂಗದಲ್ಲಿ ಸಹಕಾರಿ ರಂಗದಲ್ಲಿ, ಸರ್ಕಾರಿ ಸಂಸ್ಥೆಯ ಹೊರ ಗುತ್ತಿಗೆಯಲ್ಲಿ ದಲಿತರು ಬರಲಾರದಂತೆ ನೋಡಿಕೊಳ್ಳುವ ಹುನ್ನಾರವೂ ಅಡಗಿದೆ. ಕೇವಲ ಮೂರು ಪರ್ಸೆಂಟ್ ಇರುವ ಮೇಲ್ಜಾತಿಗಳಿಗೆ ಹತ್ತು ಪರ್ಸೆಂಟ್ ಮೀಸಲಾತಿ ಕೊಟ್ಟು ಅದಕ್ಕೆ ಆರ್ಥಿಕ ಹಿಂದುಳಿದಿರುವಿಕೆಯ ಮಾನದಂಡದಲ್ಲಿ ಕೋರ್ಟ್‌ನಲ್ಲಿ ಪ್ರಶ್ನೆಯನ್ನೇ ಮಾಡಲಾಗದಂತಹ ಪರಿಸ್ಥಿತಿ ನಿರ್ಮಾಣ ಮಾಡಿದ




ಬಿಜೆಪಿ ಹುನ್ನಾರಕ್ಕೆ ಹೊಲೆ-ಮಾದಿಗ ಸಮುದಾಯಗಳು ಒಗ್ಗಟ್ಟಾಗಿ ತಮ್ಮ ಶಕ್ತಿ ಪ್ರದರ್ಶನ ತೋರಬೇಕಿದೆ.

ಈಗ ಒಳಮೀಸಲಾತಿಯಲ್ಲೂ ಎರಡು-ಮೂರು ಹುದ್ದೆಗಳಲ್ಲಿ ಎದ್ದಿರುವ ಗೊಂದಲದಲ್ಲಿ ಕೇಳಿ ಬರುತ್ತಿರುವ ಕೂಗು ಮೊದಲ ಸ್ಥಾನದಲ್ಲಿರುವ ಮಾದಿಗರಿಗೆ ಅವಕಾಶ ಸಿಕ್ಕಿಬಿಟ್ಟರೆ ನಾವೇನು ಮಾಡುವುದು ಎಂದು ಹೊಲೆಯ ಸಮುದಾಯದ ಪ್ರಶ್ನೆ. ಇದು ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳಿಗೆ ಎದ್ದಿರುವ ವಿವಾದ. ರೋಸ್ಟರ್ ಸಿಸ್ಟಮ್ ಅಡಿಯಲ್ಲಿ ಮುಂದೆ ಹೊಲೆಯ ಸಮುದಾಯಗಳಿಗೆ ಸಿಕ್ಕರೆ ಮುಂದಿನ ಸಾಲಿನಲ್ಲಿರುವ ಅಲೆಮಾರಿಗಳೋ, ಸ್ಪಶ್ಯ ಸಮುದಾಯಗಳೋ ಪ್ರಶ್ನಿಸಿದರೆ ಆಗ ಉತ್ತರ ಏನಾಗಿರಬೇಕು. ಆಗ ಒಳಮೀಸಲಾತಿ ಕಲ್ಪಿಸಿರುವುದೇ ಅನ್ಯಾಯಕ್ಕೊಳಗಾದವರಿಗೆ ಮೊದಲ ಅವಕಾಶ ಕೊಟ್ಟು ಆನಂತರ ಆ ಅವಕಾಶವನ್ನು ರೋಸ್ಟರ್ ಸಿಸ್ಟಮ್ ಅಡಿಯಲ್ಲಿ ಚಲನೆಗೊಂಡು ಎಲ್ಲರಿಗೂ ಪಾಲು ಸಿಗುತ್ತದೆ ಎಂಬ ವಿಶಾಲ ದೃಷ್ಟಿಕೋನವೇ ಮುಖ್ಯವಾಗಬೇಕು ಅಲ್ಲವೆ?

ಒಂದಾಗೋಣ ಕೈ ಜೋಡಿಸಿ ಸಂಘಟನೆಯ ಮೂಲಕ ಎರಡು ಸಮುದಾಯಗಳ ಮಾತಗಳನ್ನು ಕೇಳುವಾಗ ಬಲಗೈ ಸಮುದಾಯದ ಸ್ನಾತಕೋತ್ತರ ವಿದ್ಯಾರ್ಥಿ ಕೃಷ್ಣಮೂರ್ತಿ ಗಣೆಗನೂರು ನಾವು ಜನರಲ್ ನಲ್ಲಿ ಸ್ಪರ್ಧಿಸಿ ಉದ್ಯೋಗ ತೆಗೆದುಕೊಂಡಿದ್ದೇ ಹೆಚ್ಚು, ನಾವೇನು ಮಾದಿಗರಿಂದ ಕಿತ್ತು ತಿನ್ನುವವರಲ್ಲ ಎಂದು ಈ ಎರಡು ಸಮುದಾಯದ ಒಡಕಿಗೆ ಮುಲಾಮು ಹಂಚಿ ಸ್ನೇಹದ ಕೈಚಾಚಲು ನಿವೇದಿಸಿಕೊಂಡಿದ್ದ. ಇಂಥ ಮನಸ್ಸುಗಳು ಎರಡು ಸಮುದಾಯಗಳಲ್ಲೂ ಇದೆ. ಒಬ್ಬರ ತುತ್ತು ಒಬ್ಬರು ಕೊಟ್ಟು ಹಂಚಿ ತಿನ್ನೋಣ ಅಂತ. ಈ ಪದ್ಯವೋ, ಹೃದಯದ ಮಾತೋ ನೋಡಿ ರವಿಚಂದ್ರಪ್ರಸಾದ್ ಕಹಳೆ ಎನ್ನುವ ಬಲಗೈ ಸಮುದಾಯದ ಯುವಕನ ಮಾತುಗಳು ಎಲ್ಲರನ್ನು ಕಣ್ತೆರೆಸುವಂತಿದೆ.

''ಹನ್ನೆರಡನೇ ಶತಮಾನದಲ್ಲಿ
ಬಸವಣ್ಣನವರ
ಕಲ್ಯಾಣಕ್ರಾಂತಿಯಲ್ಲಿ ಹೊಲೆಯರ
ಹೊನ್ನಯ್ಯನಾಗಲಿ ಮಾದಿಗರ
ಹರಳಯ್ಯನಾಗಲಿ
ಕಚ್ಚಾಡಲಿಲ್ಲ
ಹದಿನೈದನೇಯ
ಶತಮಾನದಲ್ಲಿ ಹೊಲೆಯರ
ಮಂಟೇಸ್ವಾಮಿಯಾಗಲಿ,
ಮಾದಿಗರ ಮಾದೇಶ್ವರನಾಗಲಿ
ಎಂದೂ ಕಚ್ಚಾಡಲಿಲ್ಲ.
ನಮ್ಮ ಯುಗದಲ್ಲಿ ಬಾಬಾ
ಸಾಹೇಬ್ ಅಂಬೇಡ್ಕರ್ ಆಗಲಿ
ಬಾಬು ಜಗಜೀವನ್ ರಾಮರಾಗಲಿ
ಎಂದೂ ಬೇರೆಯಾಗಲಿಲ್ಲ
ಬಿ.ರಾಚಯ್ಯನವರಾಗಲಿ,
ಎನ್ ರಾಚಯ್ಯನವರಾಗಲಿ
ರಾಜಕಾರಣದಲ್ಲಿ
ಭಿನ್ನಭೇದವೆಣಿಸಲಿಲ್ಲ.
ಹೊಲೆಯನಾದ ನಾನಾಗಲಿ
ನನ್ನ ಗೆಳೆಯ ಮಾದಿಗ
ಅರಕಲವಾಡಿ ನಾಗೇಂದ್ರನಾಗಲಿ
ಎಂದೂ ಸ್ನೇಹ ಕಳೆದುಕೊಳ್ಳಲಿಲ್ಲ.
ಇನ್ನು ಹೊಲೆಯರಿಗೂ,
ಮಾದಿಗರಿಗೂ ಆದ ಪ್ರೇಮ
ವಿವಾಹಗಳು, ಅಂತರ್ಜಾತಿ
ವಿವಾಹಗಳಿಗೆ ಲೆಕ್ಕವಿಲ್ಲ. ಈಗ
ಒಂದೇ ಬುದ್ದಮಾರ್ಗದಲ್ಲಿರುವ
ದಾರಿ, ಹಸಿದಿದ್ದೀಯ ನನ್ನ ತುತ್ತು
ನಿನಗೆ ಎಂದು ಹೇಳುವ ಮಾರ್ಗ.
ಜನಪದರಲ್ಲಿ,
ತತ್ವಪದಕಾರರಲ್ಲಿ ಇಲ್ಲದ ಭೇದ
ಅಕ್ಷರಮಾತೆಯನ್ನು ತಲೆಮೇಲೆ
ಹೊತ್ತ ನಮಗೆ ಬರುವುದು ಬೇಡ
ಒಂದಾಗೋಣ ನಾವೇ
ನಾವೋಗೋಣ
ಸಿದ್ದಲಿಂಗಯ್ಯನವರ
ಹೊಲೆಮಾದಿಗರ ಹಾಡು
ಎಂದೂ ನನ್ನೊಳಗೆ ಜೀವಂತ..''
-ರವಿಚಂದ್ರಪ್ರಸಾದ್ ಕಹಳೆ

ಇಂಥ ಮನಸ್ಸುಗಳು ಸಾಕಷ್ಟು ನಮ್ಮ ನಡುವೆ ಇದ್ದಾವೆ. ಅಲ್ಲದೆ ಈ ಐವತ್ತಾರು ಸಾವಿರ ಉದ್ಯೋಗಗಳ ಆಚೆ ಇರುವ ಕೋಟ್ಯಾಂತರ ದಲಿತರ ಮನದಾಳದ ಬಯಕೆ ದಲಿತ ಮುಖ್ಯಮಂತ್ರಿ ಈ ರಾಜ್ಯದಲ್ಲಿ ಉದಯಿಸಬೇಕು ಎಂದು. ಒಗ್ಗಟ್ಟಾಗದಿದ್ದರೆ ಅದನ್ನು ತಪ್ಪಿಸಲು ಹಾತೊರೆಯುತ್ತಿರುವ ಬಿಜೆಪಿಯಂಥ ಪಕ್ಷಕ್ಕೆ ತಮ್ಮ ಒಡೆದಾಳುವ ನೀತಿಯನ್ನು ಜಾರಿಗೊಳಿಸಲು ಸಹಕಾರಿಯಾಗುತ್ತದೆ. ಹಾಗಾಗಿ ಅಲೆಮಾರಿಗಳಿಗೂ ಒಂದು ಪರ್ಸೆಂಟ್ ಕೊಟ್ಟು ಒಳಮೀಸಲಾತಿಯನ್ನು ಒಬ್ಬರ ತುತ್ತನ್ನು ಮತ್ತೊಬ್ಬರಿಗೆ ಕೊಡುವ ಮೂಲಕವೇ ಒಗ್ಗಟ್ಟು ತೋರಬೇಕು. ಕುಂಬಾರ ಶೇಷಗಿರಿಯಪ್ಪನ ಕೊಲೆ ಪ್ರಕರಣದಲ್ಲಿ ಅನ್ಯಾಯದ ವಿರುದ್ದ ಇದ್ದ ದಲಿತ ಚಳವಳಿ, ಹಿಂದುಳಿದವರಿಗೆ ವರವಾದ ಮಂಡಲ್ ಆಯೋಗದ ಪರವಿದ್ದ ದಲಿತ ಚಳವಳಿ, ಅಲ್ಪಸಂಖ್ಯಾತರ ಮೇಲೆ ಬಿಜೆಪಿ ಮುಗಿಬೀಳುವಾಗ ಸಹಾಯಕ್ಕೆ ಬರುವ ದಲಿತ ಚಳವಳಿ ತಮ್ಮ ವಿಚಾರಕ್ಕೆ ಇನ್ನು ಹೆಚ್ಚಿನ ಒಗ್ಗಟ್ಟು ಪ್ರದರ್ಶಿಸಬೇಕಾಗಿದೆ.

ಸಿದ್ದಯ್ಯನವರ ಪತ್ನಿ ಗಂಗರಾಜಮ್ಮ ಬಲಗೈ ಸಮುದಾಯದವರು. ಅವರ ದಲಿತ ಚಳವಳಿಯ ಒಡನಾಟವೇ ಮಾದಿಗರಾದ ಸಿದ್ದಯ್ಯನವರ ಆಲೋಚನೆಯನ್ನು ವಿಸ್ತರಿಸುವಲ್ಲಿ ಸಹಾಯ ಮಾಡಿದೆ. ಅಲ್ಲದೇ, ದೇವನೂರು ಮಹದೇವರ ಕುಸುಮಬಾಲೆಯ ಎಂದು ಹೇಳುವ ಮಾತಾಗಲಿ, ಚನ್ನನ ಕೊಲೆಗೆ ಅಥವಾ ಎಲ್ಲಾ ಅನ್ಯಾಯದ ವಿರುದ್ದ ದಲಿತ ಸಮುದಾಯದ ಎಲ್ಲರೂ ಮೆರವಣಿಗೆ ಹೋಗುವುದಾಗಲಿ ಮರೆಯಲು ಸಾಧ್ಯವೇ. ಹೊಲೆ-ಮಾದಿಗರ ನಡುವಿನ ಅಂತರ್ಜಾತಿ ಮದುವೆಯಾಗಲಿ, ಬೇರೆ ಜಾತಿ, ಧರ್ಮದವರೊಂದಿಗಿನ ಮದುವೆಗಳಾಗಲಿ ಕುವೆಂಪುರವರ ಮಾನವ ಮಂಟಪವನ್ನು ಕಟ್ಟಲು ಸಹಕಾರಿಯಾಗಿದೆ. ಅಂತಹ ಆಲೋಚನೆಗಳು ನಮ್ಮ ನಡುವೆ ಸಾಕಷ್ಟು ಇದೆ.

ಹಾಗಾಗಿ ಸರ್ಕಾರ 15 ರಿಂದ 17ಕ್ಕೆ ಏರಿಸಿದ ಮೀಸಲಾತಿಯ ಪ್ರಮಾಣಕ್ಕೆ ಕಾನೂನಿನ ಮಾನ್ಯತೆ ಬರುವಂತೆ ಮಾಡಬೇಕಿದೆ. ಮೀಸಲಾತಿ ಪ್ರಮಾಣವನ್ನು ಏರಿಸಿದ ಸಂದರ್ಭದಲ್ಲಿ ಆಗುವ ರೋಸ್ಟರ್ ಗೊಂದಲಗಳನ್ನು ಕಾನೂನು ತಜ್ಞರ ಮೂಲಕ ಬಗೆಹರಿಸಿಕೊಳ್ಳಬೇಕಿದೆ. ಆ ಸಮಯದಲ್ಲಿ ಹತ್ತೊಂಭತ್ತು ಹುದ್ದೆ ಮೇಲಿರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಿಕೊಂಡು ಉಳಿದ ಎರಡು ಮೂರು ಹುದ್ದೆಗಳನ್ನು ಹೊಸ ರೋಸ್ಟರ್ ಅನ್ವಯ ತುಂಬಬೇಕಿದೆ. ಇದಕ್ಕೆ ಎರಡು ಸಮುದಾಯದವರ ಒಪ್ಪಿಗೆ ಪಡೆದು ಮುಂದುವರೆದು ಬಿಟ್ಟರೆ ಬಿಜೆಪಿಯ ಒಡೆದಾಳುವ ನೀತಿ ಸೋತಂತೆಯೆ. ಈ ಇಚ್ಛಾಶಕ್ತಿ ಸರ್ಕಾರಗಳಿಗೆ ಇಲ್ಲದೇ ಹೋದರೆ ಅಹಿಂದ ಒಗ್ಗಟ್ಟು ಎಲ್ಲಿ ಉಳಿಯುತ್ತದೆ. ಮುಖ್ಯಮಂತ್ರಿಗಳ ಅಹಿಂದ ರಾಜಕಾರಣಕ್ಕೆ ಅರ್ಥ ಎಲ್ಲಿ ಬರುತ್ತದೆ!.

ಮಾದಿಗ ಸಮುದಾಯದ ದಲಿತ ಚೇತನ ಕೃಷ್ಣಪ್ಪನವರ ಪತ್ನಿ ಇಂದಿರಾ ಕೃಷ್ಣಪ್ಪ ಬ್ರಾಹ್ಮಣರಾಗಿಯೂ ದಲಿತ ಸಮುದಾಯದ ಒಗ್ಗಟ್ಟಿನ ಜೊತೆ ಹೆಜ್ಜೆ ಹಾಕುತ್ತಾ ಅವರ ಪತಿಯ ಆಶಯವನ್ನು ಈಗಲೂ ಈಡೇರಿಸಲು ಮುಂದೆ ಬಂದು ಒಂದಾಗೋಣ ಕೈ ಜೋಡಿಸಿ ಉದ್ಘಾಟನೆ ಮಾಡಿ ಆಶಯ ನುಡಿಗಳನ್ನು ಹೇಳಿದ್ದು ಮಾನವಕುಲದ ಏಕತೆಯನ್ನೆ ಪ್ರತಿಪಾದಿಸುತ್ತದೆ. ಇಂಥ ಮನಸ್ಸುಗಳನ್ನು ಒಗ್ಗೂಡಿಸುವ ಅಂತರ್ಜಾತಿ ವಿವಾಹಿತರಿಗೆ ಮೀಸಲಾತಿ ಕೊಡಲು ರವಿವರ್ಮಕುಮಾರ್ ಆಯೋಗದ ಮುಂದೆ ಹೋಗಿದ್ದೆವು ಎಂದು ಇಂದಿರಾ ಕೃಷ್ಣಪ್ಪನವರು ಹೇಳಿದ್ದು ಹೊಲೆಮಾದಿಗ ಜೋಡಿ ಪ್ರೇಮಿಗಳ ಪಾಲಿಗೂ ಒಂದು ಆಶಾಕಿರಣ.

ಇನ್ನುದು ಸರಸ್ವತಿ ಅವರಂತಹ ಬೀದಿ ಹೋರಾಟಗಾರ್ತಿ ಲೈಂಗಿಕ ಕಾರ್ಯಕರ್ತೆಯರ ಪರವಾಗಿ ಮಾತನಾಡುತ್ತಾ ಇವರಿಗೆ ಯಾಕೆ ಮೀಸಲಾತಿ ಇಲ್ಲ ಎಂದು ಎಲ್ಲೇ ಹೋದರೂ ಕೇಳುತ್ತಿದ್ದಾರೆ. ಇಂಥ ದಲಿತ ಮೌಲ್ಯವೇ ನಮ್ಮಂಥ ಹಲವು ಜನರನ್ನು ಜಾತಿ, ಧರ್ಮದ ಆಚೆ ಸೆಳೆದಿದೆ. ಇಂಥ ಆಶಯಗಳನ್ನು ಇಟ್ಟುಕೊಂಡು ಎರಡು ಸಮುದಾಯದ ನಡುವೆ ಒಗ್ಗಟ್ಟಿನ ಮಂತ್ರ ಹೇಳಿಸಲು ಒಂದಾಗೋಣ ಕೈಜೋಡಿಸಿ ಮೂಲಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಒಳಗೊಂಡು ಎರಡು ಸಮುದಾಯಗಳ ಹಿರಿಯರು, ಹೋರಾಟಗಾರರು ಮಾತಾಡಿ ಒಂದು ನಿರ್ಣಯಕ್ಕೆ ಬರಲಾಯಿತು. ಈ ನಿರ್ಣಯ ಇನ್ನು ಉತ್ತಮಗೊಳಿಸಬಹುದು. ಒಂದಾಗಲು ಗಡ್ಡಮ್ ವೆಂಕಟೇಶ ಅವರಂತಹ ಹಿರಿಯರು ಯಾವುದೇ ಸಭೆಗಾದರೂ ಖುದ್ದು ಹಾಜರಿದ್ದು ಓಡಾಡುತ್ತಿರುವುದು ನೋಡಿದರೆ, ಇಂತಹ ಜೀವಗಳನ್ನು ಓಡಾಡಿಸಬೇಕೇ, ಒಗ್ಗಟ್ಟಾಗಿ ಅವರ ಮುಂದೆ ನಿಂತರೆ ಅವರ ದಲಿತ ಚಳವಳಿಯ ಅನುಭವಕ್ಕೆ ಒಂದು ಪ್ರೀತಿಯ ನಗೆ ನಕ್ಕು ಬಿಟ್ಟರೆ ಅದೇ ಅವರಿಗೆ ಕೊಡುವ ಬಹುದೊಡ್ಡ ಗೌರವ.

ನಾವು ಈ ಸಮುದಾಯದ ಒಪ್ಪಿಗೆ ಪಡೆದು ತೆಗೆದುಕೊಂಡ ನಿರ್ಣಯದ ಪಟ್ಟಿ ಇಂತಿದೆ.

ಸಭೆಯಲ್ಲಿ ಎಲ್ಲಾ ಸಮುದಾಯಗಳು ಒಳಮೀಸಲಾತಿಯನ್ನು ಅತಿ ಶೀಘ್ರದಲ್ಲಿ ಜಾರಿಗೊಳಿಸುವಂತೆ ಒಕ್ಕೊರಲಿನಿಂದ ನಿರ್ಧಾರಕ್ಕೆಗೊಳ್ಳಲು ನಿರ್ಣಯಿಸಲಾಯಿತು.

2. ಪರಿಶಿಷ್ಟ ಜಾತಿಗಳ ನೋಡಲ್ ಏಜೆನ್ಸಿ ಯಾಗಿರುವ ಸಮಾಜಕಲ್ಯಾಣ ಇಲಾಖೆಯ ಅಧ್ಯಕ್ಷತೆಯಲ್ಲಿ ಕಾನೂನು ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಪ್ರಧಾನ ಕಾರ್ಯದರ್ಶಿ ಹಾಗೂ ಕಾನೂನು ಇಲಾಖೆ ಸಮನ್ವಯತೆ ಹಾಗೂ ಚರ್ಚೆಯ ಮೂಲಕ ರೋಸ್ಟರ್ ಸಮಸ್ಯೆಯನ್ನು ಬಗೆಹರಿಸಬೇಕು. ಇದಕ್ಕೆ ಶಿಕ್ಷಣ ಹಾಗೂ ಉದ್ಯೋಗದ ಹಿಂದುಳಿದಿರುವಿಕೆ ಆಧರಿಸಿ ಸಾಮಾಜಿಕ ನ್ಯಾಯ ಪಾಲಿಸಬೇಕು. ಆನಂತರ ಕೂಡಲೇ ಉದ್ಯೋಗ ಭರ್ತಿ ಮಾಡಬೇಕು.

3. ರೋಸ್ಟರ್ ಸಮಸ್ಯೆ ಬಗೆಹರಿಸುವ ಹಂತದಲ್ಲಿ 19 ಹುದ್ದೆಗಳಿಗಿಂತ ಹೆಚ್ಚಿರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು.

4. ಜನಸಂಖ್ಯಾ ಆಧಾರಿತವಾಗಿ ಹದಿನೇಳಕ್ಕೆ ಮೀಸಲಾತಿಯನ್ನು ವಿಸ್ತರಿಸಿ ಅದನ್ನು ಒಂಭತ್ತನೇ ಶೆಡ್ಯೂಲ್ ಗೆ ಸೇರಿಸಲು ಸರ್ವಪಕ್ಷಗಳ ಸಭೆ ಕರೆದು ತೀರ್ಮಾನಿಸಬೇಕು. ಈ ವಿಸ್ತರಣೆಯಲ್ಲಿ ಒಳಮೀಸಲಾತಿ ಕೂಡಲೇ ಜಾರಿ ಮಾಡಬೇಕು.

5. ಖಾಸಗಿ ವಲಯದಲ್ಲಿ ಹಾಗೂ ಹೊರಗುತ್ತಿಗೆಯಲ್ಲಿ ಹಾಗೂ ಸಹಕಾರಿ ರಂಗದಲ್ಲಿ ಮೀಸಲಾತಿ ಜಾರಿ ಮಾಡಬೇಕು.

6. ಮ್ಯಾನುಯಲ್ ಸ್ಕ್ಯಾವೆಂಜರ್ಸ್, ಲೈಂಗಿಕ ಕಾರ್ಯಕರ್ತೆಯರನ್ನು ಮೀಸಲಾತಿ ಒಳಗೆ ಆದ್ಯತೆ ನೀಡಬೇಕು.

ಅಲೆಮಾರಿ ಸಮುದಾಯಗಳನ್ನು ಒಳಮೀಸಲಾತಿಯಲ್ಲಿ ಆದ್ಯತೆಯಾಗಿ ಪರಿಗಣಿಸಬೇಕು

ಸಮುದಾಯಗಳ ನಡುವಿನ ಬಿಕ್ಕಟ್ಟು, ಒಡಕಿಗೆ ಮದ್ದಾಗಿ ಈ ಎಲ್ಲಾ ಕಾನೂನು ಕ್ರಮಗಳನ್ನು ಕೈಗೊಂಡ ನಂತರವೂ, ಬುದ್ಧ ಪ್ರಜ್ಞೆಯನ್ನು ಬೆಳೆಸಲು ದೀರ್ಘಕಾಲೀನ ಕಾರ್ಯಕ್ರಮಗಳನ್ನೂ ರೂಪಿಸಬೇಕು

ಇಂಥ ಮಾತುಗಳ ಆಚೆ ಯೋಚಿಸುವ ಅಲ್ಲಮಪ್ರಭುಗಳ ವಚನ ಈ ರೀತಿ ಇದೆ.

''ಜಲದೊಳಗಣ ಕಿಚ್ಚು
ಜಲವ ಸುಡದೆ ತಾನಾಗಿದ್ದಿತು
ನೋಡ
ನೆಲೆಯನರಿದೆನೆಂದರೆ ಅದು
ಜಲವು ತಾನಲ್ಲ. ಕುಲದೊಳಗಿದ್ದು
ಕುಲವ ಬೆರೆಸದೆ ನೆಲೆಗೆಟ್ಟು
ನಿಂದುದನಾರು ಬಲ್ಲರು
ಒಳಹೊರಗಿದ್ದು
ತೆರದೊರದಿಪ್ಪದು ಗುಹೇಶ್ವರ
ನಿಮ್ಮ ನಿಲುವು ನೋಡಾ''

ಈ ವಚನ ದಾರಿದೀಪದಂತೆ, ಎಡವದಂತೆ ಕಾಪಾಡಲಿ. ನೈಜ ಬೋಧಿ ಪ್ರಜ್ಞೆಯೇ ಸಂರಚನೆ, ಒಂದಕ್ಕೊಂದರ ಸಂಬಂಧದ ಅರಿವು ಸ್ವಂತಿಕೆ ಎಂಬುದಿಲ್ಲ. ಒಂದರೊಳಗೊಂದು ಇದೆ ಎಂಬ ಮಹಾ ಅರಿವು ಆ ಅರಿವಿಗೆ ಬುದ್ದಗುರುಗಳು ನೀರೆರೆದು ಪೋಷಿಸಿರುವಾಗ ಅರಳಿಮರದಂತೆ ನೆರಳಾಗುವುದೊಂದೇ ದಾರಿ.

**ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ**

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR